ಸಂಪುಟ : 8 ಸಂಚಿಕೆ : 177 ಪುಟ : 4 ಬೆಲೆ : 3.00 ಗುರುವಾರ ಆಗಸ್ಟ್ 17, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 177 Pages : 4 Price : 3.00 Thursday August 17, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಆಗಸ್ಟ್ 17 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಆಯುಕ್ತರ ಪ್ರಕಟಣೆ ತಿಳಿಸಿದೆ.

**ಸ್ಥಳಗಳ ವಿವರ :** ವಾರ್ಡ್ ನಂ–31ರಲ್ಲಿ ಈಶ್ವರ ಗುಡಿ ಲೈನ್ 1ನೇ ಕ್ರಾಸ್, ಕೊನೇರಿಯವರೆಗೆ ರೇಣುಕ್ಕರ ಲೈನ್, ಅಟೋ ಸ್ಟ್ಯಾಂಡ್, ಹುಡ್ಕೋ ಮೇಲಿನ ಭಾಗ, 2ನೇ ಕ್ರಾಸ್, 3ನೇ ಕ್ರಾಸ್, ವಾರ್ಡ ನಂ– 16ರಲ್ಲಿ ಹೊಂಬಳನಾಕಾ, ಜನತಾ ಕಾಲೋನಿಯ ಮಸೂತಿ ಭಾಗ–1, ಭಾಗ_2, ಭಾಗ–3, ಭಾಗ–4, ಭಾಗ–5, ಭಾಗ–6 ಭಟ್ಟರ್ ಲೈನ್, ಅಡ್ಡೇದಾರ ಲೈನ್, ವಾರ್ಡ್ ನಂ– 6ರಲ್ಲಿ ಶರಣಬಸವೇಶ್ವರ ನಗರ, ಕೆಲವು ಭಾಗಗಳು, ವಾರ್ಡ್ ನಂ–29ರಲ್ಲಿ ಪಾಪಡಿಯವರ ಲೈನ್, ನೆಲ್ಸನ್ ಮಂಡೇಲಾ ಅವರ ಲೈನ್, ವಾರ್ಡ್ ನಂ– 28 ಸಿ.ಎಸ್. ಪಾಟೀಲ ಲೈನ್, ನಾಗರಕಟ್ಟಿ ಲೈನ್, ತಂಬ್ರಳ್ಳಿ ಲೈನ್, ವಾರ್ಡ್ ನಂ–21ರಲ್ಲಿ ಎಲಿಗಾರ ಪ್ಲಾಟ್, ಲಕ್ಷ್ಮೇಶ್ವರ ಲೈನ್, ಕರಿಬಿಷ್ಠಿ ಲೈನ್, ಭಾಗ–1 ಭಾಗ–2 ಪಾಟೀಲ್ ಲೈನ್, ವಾರ್ಡ್ ನಂ–27ರಲ್ಲಿ ಮಲ್ಲಾಡದವರ ಲೈನ್, ಅಸೂಟಿಯವರ ಲೈನ್, ಸಂಭಾಪೂರ ಲೈನ್, ಕಾಶಿವಿಶ್ವನಾಥ ನಗರ, ಮಾಕೊಟೇಶ್ವರ ಲೈನ್, ವಿ.ಆರ್.ಎಲ್. ಆಫೀಸ್, ಪೊಲೀಸ್ ಕ್ವಾರ್ಟರ್ಸ್, ಅಬ್ಬಿಗೇರಿ ಲೈನ್, ಪುಟ್ಟರಾಜ ನಗರ, ಮುತ್ತಿನಪೆಂಡಿಮಠ ಲೈನ್,

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡೆತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಲು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಚನ ಶ್ರಾವಣ–2023 ಪ್ರಾರಂಭೋತ್ಸವ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಬಸವದಳ, ಬಸವಕೇಂದ್ರ, ಲಿಂಗಾಯತ ಪ್ರಗತಿಶೀಲ ಸಂಘ ಗದಗ–ಬೆಟಗೇರಿ ಇವುಗಳ ಸಂಯುಕ್ತಾಶ್ರಯದಲ್ಲಿ 'ವಚನ ಶ್ರಾವಣ'ವನ್ನು ಗದಗ–ಬೆಟಗೇರಿ ಅವಳಿ ನಗರದ ಬಡಾವಣೆಗಳಲ್ಲಿ ಪ್ರಾರಂಭಿಸಲಾಗುತ್ತಿದ್ದು, ಗದಗ ಶಹರದ ಬಸವೇಶ್ವರ ನಗರದ ಶರಣ ಸಿದ್ಧಲಿಂಗಪ್ಪ ದಾನಪ್ಪ ತಡಸದ ಇವರ ಮನೆಯಲ್ಲಿ ಗುರುವಾರ ಸಂಜೆ 5.30ಕ್ಕೆ ಪ್ರಾರಂಭಗೊಳ್ಳಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವದಳದ ಶರಣ ವಿ ಕೆ ಕರೇಗೌಡ್ರ ವಹಿಸುವರು. ಅತಿಥಿಗಳಾಗಿ ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶರಣ ಶೇಖಣ್ಣ ಕಳಸಾಪೂರಶೆಟ್ರ ಮತ್ತು ಶರಣ ಬಸವಕೇಂದ್ರದ ಕಾರ್ಯದರ್ಶಿ ಎಸ್ ಎಂ ಕವಳಿಕಾಯಿ ಆಗಮಿಸುವರು. ಇದೇ ಸಂದರ್ಭದಲ್ಲಿ 'ವಚನ ಶ್ರಾವಣ–2023' ಕಿರು ಹೊತ್ತಿಗೆಯನ್ನು ಬಿಡುಗಡೆಗೊಳಿಸಲಾಗುವುದು.

ವಚನ ಚಿಂತನೆಯನ್ನು ಶರಣ ಎಸ್ ಎ ಮುಗದ ಮಾಡುವರು. ಕಾರಣ, ಬಸವದಳ, ಬಸವಕೇಂದ್ರ, ಲಿಂಗಾಯತ ಪ್ರಗತಿಶೀಲ ಸಂಘ, ಗದಗ ತಾಲೂಕಾ ಶರಣ ಸಾಹಿತ್ಯ ಪರಿಷತ್ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ಸಾರ್ವಜನಿಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಘಟಕದಲ್ಲಿ ಖಾಲಿಯಿರುವ ಜಿಲ್ಲಾ ಲೆಕ್ಕಪತ್ರ ವ್ಯವಸ್ಥಾಪಕ ಹುದ್ದೆಯನ್ನು ಮೆರಿಟ್ ಆಧರಿಸಿ ನಿಬಂಧನೆಗೊಳಪಟ್ಟು ಅರ್ಹ ಅಭ್ಯರ್ಥಿಗಳಿಂದ ಈಗಾಗಲೇ ಪತ್ರಿಕಾ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಲಾಗಿತ್ತು. ಸದರಿ ಹುದ್ದೆಯ ನೇರ ಸಂದರ್ಶನಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆಗಸ್ಟ್ 18 ರಂದು ಬೆಳಿಗ್ಗೆ 11 ಘಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, 101, ಜಿಲ್ಲಾ ಆಡಳಿತ ಭವನ, ಗದಗ ಇಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಹುದ್ದೆಯ ನೇಮಕಾತಿಗೆ ಧಾರವಾಡ ಉಚ್ಚನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದ ಪ್ರಯುಕ್ತ ನೇಮಕಾತಿ ಸಂದರ್ಶನವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಸಮಿತಿಯ ಮುಂದಿನ ನಿರ್ಣಯವನ್ನು ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಲಾಗುವುದು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸಹಕರಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಪ್ಲೋಮಾ ಪ್ರವೇಶಾತಿ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪಾಲಿಟೆಕ್ನಿಕ್, ನರಸಾಪುರ ಬೆಟಗೇರಿ ಗದಗ ಸಂಸ್ಥೆಯಲ್ಲಿ ಖಾಲಿ ಇರುವ ಡಿಪ್ಲೋಮಾ ಕೋರ್ಸ್ ಸೀಟುಗಳಿಗೆ 2ನೇ ವರ್ಷದ/ ತೃತೀಯ ಸೆಮಿಸ್ಟರ್ ನ ಡಿಪ್ಲೋಮಾ ಪ್ರವೇಶಕ್ಕೆ 2 ವರ್ಷದ ಐ.ಟಿ.ಐ/ ದ್ವಿತೀಯ ಪಿ.ಯು.ಸಿ. (ವಿಜ್ಞಾನ/ ತಾಂತ್ರಿಕ ವಿಷಯಗಳು) ಪಾಸಾದ ಅರ್ಹ ಅಭ್ಯರ್ಥಿಗಳಿಂದ ಪ್ರವೇಶ ಪ್ರಕ್ರಿಯೆಯನ್ನು ಪ್ರಾಂಶುಪಾಲರ ಹಂತದಲ್ಲಿ " ಆನ್‌ಲೈನ್ " ಮೂಲಕ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಪ್ರವೇಶದ ಅವಧಿಯನ್ನು ಆಗಸ್ಟ್ 26ರವರಗೆ ವಿಸ್ತರಿಸಿ ಅರ್ಹ ಅಬ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಯನ್ನು ಕಾಲೇಜಿನ ಕಚೇರಿ ಅವಧಿಯಲ್ಲಿ ಪಡೆಯಬಹುದಾಗಿದೆ ಎಂದು ಗದಗ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ನರಗುಂದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಖಾಲಿ ಇರುವ ಗಣಿತ ಶಾಸ್ತ್ರ , ಗಣಕಯಂತ್ರ ವಿಜ್ಞಾನ ಇಂಜಿನೀಯರಿಂಗ್, ಎಲೆಕ್ಟ್ರಾನಿಕ್ಸ್, ಆರ್ಟಿಫಿಸಿಯಲ್ ಇಂಟಲಿಜೆನ್ಸ್ ಮಾಹಿತಿ ತಂತ್ರಜ್ಞಾನ ವಿಷಯಗಳನ್ನು ಬೋಧಿಸಲು ಅರೆಕಾಲಿಕ ಉಪನ್ಯಾಸಕರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಸಂಸ್ಥೆಗೆ ಅಥವಾ ದೂರವಾಣಿ ಸಂಖ್ಯೆ 9731715913/7204038613 / 08377–200143 ಮುಖಾಂತರ ಸಂಪರ್ಕಿಸಬಹುದಾಗಿದೆ. ಅರ್ಜಿಯನ್ನು ನೇರವಾಗಿ ಸಂಸ್ಥೆಗೆ / ಸಂಸ್ಥೆಯ ಇ–ಮೇಲ್ ಐಡಿ/ ಅಂಚೆ ಮುಖಾಂತರ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ತಲುಪಿಸಬೇಕು. ಅರ್ಜಿ ಸಲ್ಲಿಸಲು ಆಗಸ್ಟ್ 26 ಕೊನೆಯ ದಿನವಾಗಿದ್ದು, ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ನರಗುಂದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ದೂರವಾಣಿ ಸಂಖ್ಯೆ 08377–200143 ಸಂಪರ್ಕಿಸಬಹುದಾಗಿದೆ.

### ವಿದ್ಯುತ್ ಕಣ್ಣಾಮುಚ್ಚಾಲೆ: ಲಕ್ಷ್ಮೇಶ್ವರದ ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ

# ರೈತರ ಬದುಕಿನೊಂದಿಗೆ ಆಟವಾಡಬೇಡಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ರೋಸಿಹೋದ ಲಕ್ಷ್ಮೇಶ್ವರ, ಅಡರಕಟ್ಟಿ, ಹರದಗಟ್ಟಿ, ಮಂಜಲಾಪುರ ಗ್ರಾಮದ ನೂರಾರು ರೈತರು ಬುಧವಾರ ಒಣಗಿದ ಗೋವಿನಜೋಳ ಬೆಳೆಯೊಂದಿಗೆ ಏಕಾಏಕಿ ಲಕ್ಷ್ಮೇಶ್ವರದ ಹೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ, ಅಧಿಕಾರಿಗಳನ್ನು ಹೊರಗಿಟ್ಟು ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.



ರೈತರಾದ ದೇವಪ್ಪ ಲಮಾಣಿ, ಚನ್ನಬಸಪ್ಪ ಅಬನೂರ, ಮಂಜು ನರೇಗಲ್ ಮತ್ತಿತರರು ತಮ್ಮ ಅಳಲನ್ನು ತೋಡಿಕೊಂಡರು. ಜುಲೈ ಕೊನೆಯ ವಾರದಿಂದ ಇವತ್ತಿನವರೆಗೂ ಸ್ವಲ್ಪವೂ ಮಳೆಯಾಗಿಲ್ಲ. ಸದ್ಯ ಒಂದೂವರೆ ತಿಂಗಳು ಆಸುಪಾಸಿನ ನೂರಾರು ಎಕರೆಯ ಗೋವಿನಜೋಳ, ಹತ್ತಿ, ಶೇಂಗಾ ಮತ್ತಿತರ ಬೆಳೆಗಳು ತೇವಾಂಶದ ಕೊರತೆಯಿಂದ ಒಣಗುತ್ತಿವೆ. ಸಾವಿರಾರು ರೂ ಖರ್ಚು ಮಾಡಿದ ಬೆಳೆದ ಬೆಳೆಯನ್ನು ಸಂರಕ್ಷಿಸಿಕೊಳ್ಳಲು ಬೋರ್‌ವೆಲ್ ನೀರಿಗೆ ಮೊರೆ ಹೋಗಿದ್ದೇವೆ. ಆದರೆ ದಿನಕ್ಕೆ 7 ಗಂಟೆ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡುತ್ತಿದ್ದ ಹೆಸ್ಕಾಂನವರು ಇದೀಗ ಕೇವಲ 3–4 ಗಂಟೆ ಮಾತ್ರ ವಿದ್ಯುತ್ ಪೊರೈಸುತ್ತಿದ್ದಾರೆ. ಈ ಸಮಯದಲ್ಲಿಯೇ 10–15 ನಿಮಿಷಕ್ಕೊಮ್ಮೆ (ಅನಿಯಮಿತ) ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತಿದೆ ಎಂದರು.

ಈ ವೇಳೆ ಭಾರತೀಯ ಕೃಷಿಕ ಸಮಾಜದ ತಾಲೂಕಾಧ್ಯಕ್ಷ ಟಾಕಪ್ಪ ಸಾತಪುತೆ, ಒಣಗುತ್ತಿರುವ ಬೆಳೆ ಉಳಿಯಬೇಕೆಂದರೆ ರೈತರಿಗೆ ಸಮರ್ಪಕ ವಿದ್ಯುತ್‌ನ ಅವಶ್ಯಕತೆಯಿದೆ. ಉಂಟಾಗಿರುವ ತಾಂತ್ರಿಕ ಸಮಸ್ಯೆಯನ್ನು ಪರಿಹರಿಸಿ ನಿತ್ಯ 7 ತಾಸು ತ್ರಿಫೇಸ್ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಇಲ್ಲದಿದ್ದರೆ ರೈತರೊಡಗೂಡಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಗುದು ಎಂದರು.

> ಈ ಭಾಗದ ರೈತರಿಗೆ ಒಣಗುತ್ತಿರುವ ಬೆಳೆಗಳನ್ನು ಉಳಿಸಿಕೊಳ್ಳಲಾಗುತ್ತಿಲ್ಲ. ಏಕಾಏಕಿ ವಿದ್ಯುತ್ ನೀಡುವಿಕೆ ಮತ್ತು ಕಡಿತದಿಂದ ಮೋಟರ್‌ಗಳು ಸುಟ್ಟು, ವಾರಕ್ಕೆರಡು ಬಾರಿ ಹತ್ತಾರು ಸಾವಿರ ರೂ ಖರ್ಚು ಮಾಡಿ ಮೋಟರ್ ದುರಸ್ಥಿ ಮಾಡಿಸುತ್ತಿದ್ದಾರೆ. ಇದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇತ್ತ ಮಳೆಯೂ ಇಲ್ಲದೆ, ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಕಣ್ಣ ಮುಂದೆಯೇ ಬೆಳೆಯೂ ಒಣಗುತ್ತಿದೆ. ಕಳೆದ ವರ್ಷವೂ ಬೆಳೆ ನಷ್ಟದಿಂದ ಸಂಕಷ್ಟದಲ್ಲಿದ್ದೇವೆ. ಈ ವರ್ಷವೂ ಎಕರೆಗೆ 30 ಸಾವಿರೂ ಖರ್ಚು ಮಾಡಿದ್ದೇವೆ. ಈ ನಡುವೆ ಬ್ಯಾಂಕಿನವರು ಸಾಲ ಮರುಪಾವತಿಸುವಂತೆ ಮನೆಗೆ ನೋಟೀಸ್ ನೀಡುತ್ತಿದ್ದಾರೆ. ಹೀಗಾದರೆ ರೈತರು ಹೇಗೆ ಬದುಕಬೇಕೆಂದು ತಮ್ಮ ಅಸಮಾಧಾನ ಹೊರಹಾಕಿದರು.



ಈ ವೇಳೆ ಮಾತನಾಡಿದ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಗುರುರಾಜ ಸಿ, ಈ ಭಾಗದಲ್ಲಿ ರೈತರ ಬೋರ್‌ವೆಲ್‌ಗಳು ಹೆಚ್ಚಿವೆ. ಏಕಕಾಲಕ್ಕೆ ಎಲ್ಲ ರೈತರು ನಿಗದಿಗಿಂತ ಹೆಚ್ಚಿನ ಸಾಮರ್ಥ್ಯದ ಮೋಟರ್ ಚಾಲೂ ಮಾಡುವುದರಿಂದ ಮತ್ತು ಹಳ್ಳದ ನೀರು ಬಳಕೆಗೆ ಅನಧಿಕೃತ ವಿದ್ಯುತ್ ಸಂಪರ್ಕ ಪಡೆಯುವುದರಿಂದ ಓವರ್‌ಲೋಡ್ ಆಗುತ್ತಿದ್ದು, ▶▶ 3ನೇ ಪುಟಕ್ಕೆ

# ರಕ್ತದ ತ್ವರಿತ ಲಭ್ಯತೆಗೆ ಶೀಘ್ರದಲ್ಲೇ ಸಭೆ: ಸಚಿವ ಎಚ್.ಕೆ ಪಾಟೀಲ

■ ವಿಜಯಸಾಕ್ಷಿ ಸುದ್ದಿ, ಗದಗ

ಸಂಕಷ್ಟದಲ್ಲಿರುವವರಿಗೆ ತ್ವರಿತವಾಗಿ ಅಗತ್ಯವಿರುವ ರಕ್ತ ಒದಗಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಲು ಶೀಘ್ರದಲ್ಲೇ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ಜರುಗಿಸಲಾಗುವುದೆಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ ಪಾಟೀಲ ಹೇಳಿದರು.

ಅವರು ಇಲ್ಲಿನ ವಾಸವಿ ಸಮುದಾಯ ಭವನದಲ್ಲಿ ನಗರಸಭಾ ಸದಸ್ಯ ಚಂದ್ರು ಕರಿಸೋಮನಗೌಡ್ರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.



ರಕ್ತದ ಅಗತ್ಯವಿರುವ ರೋಗಿಗಳಿಗೆ ತ್ವರಿತವಾಗಿ ರಕ್ತ ಲಭ್ಯವಾದರೆ, ಅವರ ಬದುಕನ್ನು ರಕ್ಷಿಸಬಹುದು. ಈ ಹಿನ್ನೆಲೆಯಲ್ಲಿ ನಗರಸಭಾ ಸದಸ್ಯ ಚಂದ್ರು ಕರಿಸೋಮನಗೌಡ್ರ ನೇತೃತ್ವದಲ್ಲಿ ಹಲವಾರು ಯುವಕರು ರಕ್ತದಾನ ಮಾಡುವ ಮೂಲಕ ಸಮಾಜಮುಖಿ ಚಟುವಟಿಕೆ ಮಾಡುತ್ತಿರುವುದು ಅನುಕರಣೀಯವಾಗಿದೆ ಎಂದು ಎಚ್.ಕೆ ಪಾಟೀಲ ಹೇಳಿದರು.

ಚಿಕ್ಕ ಮಕ್ಕಳಿಂದ ಕೇಕ್ ಕತ್ತರಿಸಿದ ಸಚಿವರು, 9ನೇ ವಾರ್ಡಿನ ಯುವಕರು, ಹಿರಿಯರೊಂದಿಗೆ ಜನ್ಮದಿನವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಸಾದಿಕ್ ಬಳ್ಳಾರಿ, ಸುರೇಶ ತರವಾಡೆ, ಜಹೀರ ಗಡಾದ, ರಾಜು ಅಣ್ಣಿಗೇರಿ, ಮಲ್ಲು ಬಾರಕೇರ, ಶ್ರೀಕಾಂತ ಮಳಲಿ, ಅಶ್ರಫ್‌ಅಲಿ ಸೈಯದ್, ಅಕ್ರಮ ಚೌಧರಿ, ಗಣೇಶ ಕಬಾಡಿ, ಮಾಧೂಸಾ ಮೇರವಾಡೆ, ಅಜ್ರುದ್ದೀನ್, ಅಶೋಕ ಕಣಗಿನಹಾಳ, ಗೂಡೂಸಾಬ ಕರಡಿ, ಅಜ್ಜಣ್ಣಗೌಡ ಪಾಟೀಲ, ಲಿಂಗರಾಜ ಬಗಲಿ, ಬಾಬು ಬದಿ, ಶರಣಪ್ಪ ಮೊಖಾಸಿ, ಬಸಣ್ಣ ಪೂಜಾರ, ಕಿರಣ ಮಾಕಾಪೂರ, ಸಾಗರ ಮಾಕಾಪೂರ, ತಯಸೂಮ್ ಬಾಗಲಕೋಟ, ಮಾಬುಲಿ ಬಳ್ಳಾರಿ ಸೇರಿದಂತೆ ಯುವ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

## ರಕ್ತ ಭಂಡಾರ ಉದ್ಘಾಟಿಸಿದ ಉಸ್ತುವಾರಿ ಸಚಿವ ಪಾಟೀಲ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ದುಂಡಪ್ಪ ಮಾನ್ವಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನೂತನವಾಗಿ ಆರಂಭಿಸಲಾದ ರಕ್ತ ಶೇಖರಣಾ ಕೇಂದ್ರವನ್ನು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಡೆಂಗ್ಯೂ ಜಾಗೃತಿರಥಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಗದಗ ವೈದ್ಯಕೀಯ ಶಿಕ್ಷಣಗಳ ಸಂಸ್ಥೆಯ ನಿರ್ದೇಶಕರಾದ ಡಾ.ಬಸವರಾಜ ಬೊಮ್ಮನಹಳ್ಳಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ, ವೈದ್ಯಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.



## ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿಯಲ್ಲಿ 2022ನೇ ಕ್ಯಾಲೆಂಡರ್ ವರ್ಷದಲ್ಲಿ (01–01–2022 ರಿಂದ 31–12–2022) ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ.

ಕ್ರೀಡಾಪಟುಗಳು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು. ಪ್ರೋತ್ಸಾಹಧನವನ್ನು ಕರ್ನಾಟಕದ ಕ್ರೀಡಾಪಟುಗಳಿಗೆ ಮಾತ್ರ ನೀಡುವುದು. ಅಂತ ರಾಷ್ಟ್ರೀಯ/ರಾಷ್ಟ್ರೀಯ/ರಾಜ್ಯಮಟ್ಟದ ತಂಡಗಳನ್ನು ಪ್ರತಿನಿಧಿಸಿ ಸರ್ಕಾರದಿಂದ ಅಂಗಿಕೃತವಾದಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾಗಿರಬೇಕು. ಕ್ರೀಡಾಪಟಗಳು ಕರ್ನಾಟಕ ಮೂಲದವರಾಗಿದ್ದು, ಬೇರೆ ರಾಜ್ಯ ಅಥವಾ ಕ್ರೀಡಾ ತಂಡವನ್ನು ( ಖಜಡಿತುಭಿಝ, ಯಡಿಟುಟಿಝ, ಖಚುಟತಿಚಿಥ ) ಪ್ರತಿನಿಧಿಸುವ ಕ್ರೀಡಾಪಟುಗಳು ಈ ಪುರಸ್ಕಾರಕ್ಕೆ ಅರ್ಹರಾಗಿರುವುದಿಲ್ಲ. ಸರ್ಕಾರಿ, ಅರೆಸರ್ಕಾರಿ ಇಲಾಖೆಗಳಲ್ಲಿ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವವರು ಅಂತರಾಷ್ಟ್ರೀಯ/ ಕ್ರೀಡಾಕೂಟಗಳಲ್ಲಿ ▶▶ 3ನೇ ಪುಟಕ್ಕೆ

## ಸಚಿವರಿಗೆ 'ಲಿವಿಂಗ್ ಲೆಜೆಂಡ್ ಎಚ್.ಕೆ.ಪಾಟೀಲ' ಕಲಾಕೃತಿ ಉಡುಗೊರೆ

■ ವಿಜಯಸಾಕ್ಷಿ ಸುದ್ದಿ, ಗದಗ

ಕಾನೂನು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತವಾರಿ ಸಚಿವರಾದ ಎಚ್.ಕೆ ಪಾಟೀಲರ 70ನೇ ಜನ್ಮದಿನದ ಪ್ರಯುಕ್ತ ಗದಗ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ಹಾಗೂ ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆಯ ಸಂಸ್ಥಾಪಕ ವಿಜಯ ಕಿರೇಸೂರ ಅವರು ಸಚಿವ ಎಚ್.ಕೆ ಪಾಟೀಲರಿಗೆ 'ಲಿವಿಂಗ್ ಲೆಜೆಂಡ್ ಎಚ್.ಕೆ ಪಾಟೀಲ' ಎಂಬ ಶೀರ್ಷಿಕೆಯ 3*4 ಅಡಿ ಅಳತೆಯ ಕ್ಯಾನ್ವಾಸ್‌ನಲ್ಲಿ ರಚಿಸಿದ ಕಲಾಕೃತಿಯನ್ನು ಉಡುಗೊರೆಯಾಗಿ ನೀಡಿದರು.



ಎಚ್.ಕೆ ಪಾಟೀಲರ ವ್ಯಕ್ತಿತ್ವವನ್ನು ಬಿಂಬಿಸುವ, ಸ್ವಾತಂತ್ರ್ಯ ದಿನಾಚರಣೆಯಂದೇ ಅವರು ಜನಿಸಿದ್ದು, ಅವರ ಹಲವಾರು ಮಹತ್ತರ ಕಾರ್ಯಗಳು, ಅವರ ತಂದೆ ಕೆ.ಎಚ್ ಪಾಟೀಲರ ಆದರ್ಶ ಪ್ರಭಾವ ಹಾಗೂ ಮಾರ್ಗದರ್ಶನದಲ್ಲಿ ಬೆಳೆದಿದ್ದು, ಹುಲಕೋಟಿ ಹುಲಿ ಎಂಬ ಬಿರುದಾಂಕಿತದಿಂದ ಸದಾ ನಗುಮುಖದ, ಲವಲವಿಕೆಯ ವ್ಯಕ್ತಿತ್ವದ ವಿಶೇಷತೆಗಳನ್ನು ಈ ಕಲಾಕೃತಿಯಲ್ಲಿ ಸಂಕೇತ ಪ್ರಧಾನವಾಗಿ ಚಿತ್ರಿಸಲಾಗಿದೆ.

ಈ ಉಡುಗೊರೆಯನ್ನು ಸ್ವೀಕರಿಸಿದ ಸಚಿವರು, ಕಲಾವಿದ ವಿಜಯ ಕಿರೇಸೂರರನ್ನು ಸನ್ಮಾನಿಸಿ, ಕಲಾಕೃತಿಯ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

## ಜಿಮ್ ಸ್ಥಾಪನೆಗೆ ಸಹಾಯಧನ

■ ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಹೊಂದಲು ಜಿಮ್ ಸ್ಥಾಪನೆಗಾಗಿ ಸಹಾಯಧನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅರ್ಹ ಕ್ರೀಡಾಪಟುಗಳು ನಿಗಧಿತ ಅರ್ಜಿ ನಮೂನೆಗಳನ್ನು ಪಡೆದು ಪ್ರಸ್ತಾವನೆಯನ್ನು ಸೆಪ್ಟೆಂಬರ್ 7 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಈ ಕಛೇರಿಗೆ ಸಲ್ಲಿಸಬೇಕು.

ಕ್ರೀಡಾಪಟುಗಳು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು. (ಆರ್.ಡಿ. ನಂಬರ ಇರುವ ಜಾತಿ ಪ್ರಮಾಣ ಪತ್ರ) ಅರ್ಜಿದಾರರು ನಿರುದ್ಯೋಗಿಗಳಾಗಿದ್ದು, ಸ್ವಯಂ ಉದ್ಯೋಗ ಹೊಂದಲು ಘಟಕ ವೆಚ್ಚದಲ್ಲಿ ಶೇಕಡಾ 75ರಷ್ಟು ರೂ.15.00 ಲಕ್ಷಗಳನ್ನು ಇಲಾಖೆ ವತಿಯಿಂದ ಭರಿಸಲಾಗುವುದು ಹಾಗೂ ಶೇಕಡಾ 25%ರಷ್ಟು ವೆಚ್ಚವನ್ನು ಸ್ವಯಂ ಭರಿಸುವ ಶರತ್ತಿಗೆ ಬದ್ಧರಾಗಿರಬೇಕು. ▶▶ 3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

**ಅನುಭವ ಎಂಬುದು ಬಹಳ ನಿಷ್ಠೂರವಾದ ಶಿಕ್ಷಕಿ. ಅವಳು ಪರೀಕ್ಷೆಯನ್ನು ಮೊದಲು ಕೊಟ್ಟು ನಂತರ ಪಾಠಗಳನ್ನು ಕೊಡುತ್ತಾಳೆ**

**–ಥಾಮಸ್ ಕಾರ್ಲೈಟ್**

## ಸಂಪಾದಕೀಯ

# ಉದ್ಯೋಗ ಸೃಷ್ಟಿ ಬಗ್ಗೆ ಮಾತಾಡಿ

ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಹೆಚ್ಚು ಮಹತ್ವ ನೀಡುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ ಸಾಕಷ್ಟು ಅನುದಾನ ಅಗತ್ಯವಿರುವುದರಿಂದ ಸರ್ಕಾರ ಆ ವಿಷಯದಲ್ಲಿ ಉದಾಸೀನ ಮಾಡದೆ ಗ್ಯಾರಂಟಿ ಅನುಷ್ಠಾನಕ್ಕೆ ಇನ್ನಿಲ್ಲದಂತೆ ಪ್ರಯತ್ನಗಳನ್ನ ಮಾಡುತ್ತಿದೆ.

ಗ್ಯಾರಂಟಿ ಯೋಜನೆಗಳು ರಾಜ್ಯದ ಪ್ರತಿ ಮನೆ ಮನಗಳನ್ನ ತಲುಪಿರುವುದು ನಿಜ. ಐದು ಗ್ಯಾರಂಟಿಗಳ ಜೊತೆಗೆ ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಜಾರಿಯಾದ ಕೃಷಿಭಾಗ್ಯ, ವಿದ್ಯಾಸಿರಿ ಕಾರ್ಯಕ್ರಮಗಳುನ್ನು ಮತ್ತೆ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಇನ್ನೊಂದೆಡೆ ಶಕ್ತಿ ಯೋಜನೆ, ಕುರಿತಾಗಿ ಹಬ್ಬಿದ ವದಂತಿಗಳಿಗೆ ಖುದ್ದು ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟನೆ ನೀಡಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಇನ್ನೂ ಹತ್ತು ವರ್ಷ ಅಧಿಕಾರದಲ್ಲಿರಲಿದೆ. 10 ವರ್ಷವೂ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಲಾಗುವುದು ಎಂದಿದ್ದಾರೆ. ಆದರೆ 10 ವರ್ಷದ ನಂತರ ಕಾಂಗ್ರೆಸ್ ಅಧಿಕಾರ ಕಳೆದುಕೊಂಡು ಬೇರೊಂದು ಪಕ್ಷ ಅಧಿಕಾರಕ್ಕೆ ಬಂದರೆ ಈ ಯೋಜನೆಯ ಗತಿ ಏನು? ಸರ್ಕಾರ ದೂರ ದೃಷ್ಟಿಯ ಯೋಜನೆಗಳನ್ನ ಜಾರಿ ಮಾಡಬೇಕೇ ಹೊರತು, ತಮ್ಮ ಪಕ್ಷ ಅಧಿಕಾರದಲ್ಲಿದ್ದಷ್ಟು ದಿನ ಜನರಿಗೆ ಸೌಲಭ್ಯ ಕೊಡುವಂತಾಗಬಾರದು. ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ರಾಜ್ಯದ ಪ್ರತಿಯೊಂದು ಮನೆಗೂ ಸರಾಸರಿ 60 ಸಾವಿರ ರೂ. ವರೆಗೆ ಸೌಲಭ್ಯಗಳನ್ನ ಕಲ್ಪಿಸಿ ಕೊಟ್ಟಂತಾಗಿದೆ. ಗ್ಯಾರಂಟಿ ಕಾರ್ಯಕ್ರಮದ ಮೂಲಕ ಬಡವರನ್ನ ಬಡತನ ರೇಖೆಗಿಂತ ಮೇಲೆತ್ತುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ ಎಂದು ಕಾಂಗ್ರೆಸ್ ನಾಯಕರು ಹೇಳಿಕೊಳ್ಳುತ್ತಾರೆ.

ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರ ಕಳೆದುಕೊಂಡ ತಕ್ಷಣ ಬಡವರು ಮತ್ತೆ ಬಡತನ ರೇಖೆಗಿಂತ ಕೆಳಗೆ ಬರುವ ಸಾಧ್ಯತೆಗಳು ಸ್ಪಷ್ಟವಾಗಿವೆ. ಸರ್ಕಾರ ಗ್ಯಾರಂಟಿ ಯೋಜನೆ ಮೂಲಕ ತಾತ್ಕಾಲಿಕವಾಗಿ ಬಡವರಿಗೆ ಅನುಕೂಲ ಕಲ್ಪಿಸಬಹುದು. ಆದರೆ ಭವಿಷ್ಯದಲ್ಲಿ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸರ್ಕಾರ ಉಚಿತ ಕೊಡುಗೆಗಳ ಜೊತೆಗೆ ಉದ್ಯೋಗ ಸೃಷ್ಟಿಗೆ ಹೆಚ್ಚು ಒತ್ತು ನೀಡಬೇಕು. ದುಡಿಯುವ ಕೈಗಳಿಗೆ ಕೆಲಸ ಸಿಗುವಂತಹ ಗುಡಿ ಕೈಗಾರಿಕೆ, ಬೃಹತ್ ಕೈಗಾರಿಕೆ ಸ್ಥಾಪನೆಗೆ ಮುಂದಾಗಬೇಕು. ಸರ್ಕಾರಿ ಮಾತ್ರವಲ್ಲದೆ ಖಾಸಗಿ ವಲಯದಲ್ಲೂ ಹೆಚ್ಚು ಉದ್ಯೋಗ ಸೃಷ್ಟಿಯಾಗಿ ಯುವಕರು ಸ್ವತಂತ್ರವಾಗಿ ಆರ್ಥಿಕ ಸಬಲತೆಯನ್ನ ಸಾಧಿಸಿಕೊಳ್ಳುವಂತಹ ದಾರಿಯನ್ನ ಸರ್ಕಾರ ಮಾಡಿಕೊಡಬೇಕು. ಅಂದಾಗ ಮಾತ್ರ ಬಡತನ ನಿರ್ಮೂಲನೆ ಸಾಧ್ಯ.

**ಕಿತ್ತೂರು ಸಂಸ್ಥಾನಕ್ಕಾಗಿ ತನ್ನ ಪ್ರಾಣವನ್ನೇ ಪಣಕ್ಕಿಟ್ಟ ವೀರ ಸೇನಾನಿಯನ್ನು ನೆನೆಯೋಣ**

# ಕಿತ್ತೂರು ರಾಣಿ ಚೆನ್ನಮ್ಮಳ ಪ್ರಾಣ ಕಾಪಾಡಿದ ಅಮಟೂರು ಬಾಳಪ್ಪ



ಕಿತ್ತೂರು ರಾಣಿ ಚೆನ್ನಮ್ಮ ಅವರು ಬ್ರಿಟಿಷರ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಪದ್ಧತಿಯ ವಿರುದ್ಧ ಹೋರಾಡಿದ ಧೀರ ರಾಣಿ. ಯುದ್ಧದ ಸಂದರ್ಭದಲ್ಲಿ ರಾಣಿ ಚೆನ್ನಮ್ಮಗೆ ಬ್ರಿಟಿಷ್ ಸೇನಾನಿ ಗುಂಡಿಡಲು ಮುಂದಾದಾಗ ಆ ಗುಂಡಿಗೆ ಎದೆಕೊಟ್ಟು ವೀರ ರಾಣಿ, ಕಿತ್ತೂರು ಸಂಸ್ಥಾನದ ರಾಣಿ ಚೆನ್ನಮ್ಮ ಅವರ ಪ್ರಾಣ ಕಾಪಾಡಿದ ಅಮಟೂರಿನ ಬಾಳಪ್ಪನವರನ್ನು ನಾವಿಂದು ನೆನೆಯಲೇಬೇಕು. ಇಂದು ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಸಂಗೊಳ್ಳಿ ರಾಯಣ್ಣನ ಹಾಗೆಯೇ ಅಮಟೂರ ಬಾಳಪ್ಪ ಅವರ ಹೆಸರು ಅಜರಾಮರವಾಗಿ ಉಳಿದಿದೆ. ಆದರೆ ಅವರನ್ನು ಸ್ಮರಿಸುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಾವಿರಾರು ವೀರ ಯೋಧರು ಕಿತ್ತೂರು ಸಂಸ್ಥಾನಕ್ಕಾಗಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟಿದ್ದಾರೆ. ಅಂತವರಲ್ಲಿ ಅಮಟೂರಿನ ಬಾಳಪ್ಪನವರು ರಾಣಿ ಚೆನ್ನಮ್ಮನ ಅಂಗರಕ್ಷಕರಾಗಿದ್ದರು. ಸಂಗೊಳ್ಳಿ ರಾಯಣ್ಣ ಅವರು ರಾಣಿಯ ಬಲಗೈ ಭಂಟನಾಗಿದ್ದರು. ಅವರಂತೆ ರಾಣಿಯನ್ನು ಬ್ರಿಟಿಷರ ಕಣ್ಣಿನಿಂದ ರಾಣಿಯನ್ನು ಕಾಪಾಡಿದ ಕೀರ್ತಿ ಬಾಳಪ್ಪನವರಿಗೆ ಸಲ್ಲುತ್ತದೆ. ಅಂದು ಬ್ರಿಟಿಷರು ಜಾರಿಗೆ ತಂದಿದ್ದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಪದ್ಧತಿಯಡಿ ಕಿತ್ತೂರು ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಬ್ರಿಟಿಷರು ಮುಂದಾಗಿದ್ದರು. ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ. ಕಿತ್ತೂರು ಸಂಸ್ಥಾನ ಚಿಕ್ಕದಾಗಿದ್ದರೂ ಸಹ ಅದನ್ನು ಕಾಪಾಡಲು ಸಾಕಷ್ಟು ವೀರ ಯೋಧರು ಯುದ್ಧದಲ್ಲಿ ಹೋರಾಡಲು ಸನ್ನದ್ಧರಾಗಿದ್ದರು. ಅಕ್ಷರಶಃ ಈ ಯುದ್ಧ ಕಿತ್ತೂರಿನ ಚಿತ್ರಣವನ್ನೇ ಬದಲಿಸಿ ಬಿಟ್ಟಿತ್ತು.

1824ರ ಅಕ್ಟೋಬರ್ 21ರಂದು ಬ್ರಿಟಿಷ್ ಅಧಿಕಾರಿ, ಧಾರವಾಡದ ಕಲೆಕ್ಟರ್ ಆಗಿದ್ದ ಸೇಂಟ್ ಜಾನ್ ಥ್ಯಾಕರೆ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿನ ಮೇಲೆ ಆಕ್ರಮಣ ಮಾಡಲು ಮುಂದಾಯಿತು. ಎರಡು ದಿನಗಳ ಚಿಕ್ಕಪುಟ್ಟ ಕಾದಾಟಗಳ ನಂತರ ಅ.23ರಂದು ಕಿತ್ತೂರು ಕೋಟೆಯ ಮೇಲೆ ಬ್ರಿಟಿಷರು ಫಿರಂಗಿ ದಾಳಿ ನಡೆಸಿದಾಗ ಇನ್ನೇನು ಕಿತ್ತೂರು ಬ್ರಿಟಿಷರ ವಶವಾಯಿತು ಎಂದೇ ತಿಳಿಯಲಾಯಿತು. ಆಗ ಸರದಾರ ಗುರುಸಿದ್ದಪ್ಪನವರ ಮುಂದಾಳತ್ವದಲ್ಲಿ ಕಿತ್ತೂರಿನ ಸೈನ್ಯ, ಬ್ರಿಟಿಷರ ಮೇಲೆ ತಿರುಗಿ ಬಿದ್ದಿತ್ತು. ರಾಣಿ ಚನ್ನಮ್ಮಳನ್ನು ಸೆರೆ ಹಿಡಿಯಲು ಅಥವಾ ಹತ್ಯೆ ಮಾಡಲೆಂದು ಬ್ರಿಟಿಷರು ಸಂಚು ರೂಪಿಸಿದ್ದರು. ಇಂಥ ಪರಿಸ್ಥಿತಿಯಲ್ಲಿ ರಾಣಿ ಚನ್ನಮ್ಮಳಿಗೆ ಬೆಂಗಾವಲಾಗಿದ್ದ ಆಕೆಯ ಅಂಗರಕ್ಷಕ ಅಮಟೂರು ಬಾಳಪ್ಪ ಹದ್ದಿನ ಕಣ್ಣಿಟ್ಟು ಕಾಯುತ್ತಿದ್ದರು. ಯುದ್ಧದ ಸಂದರ್ಭದಲ್ಲಿ ಥ್ಯಾಕರೆಯು ರಾಣಿ ಚನ್ನಮ್ಮಳತ್ತ ಮುನ್ನುಗ್ಗಿ ತನ್ನ ಪಿಸ್ತೂಲಿನಿಂದ ಆಕೆಗೆ ಗುರಿ ಇಟ್ಟ. ಇದನ್ನು ಗಮನಿಸಿದ ಅಮಟೂರು ಬಾಳಪ್ಪ ಒಂದು ಕ್ಷಣವನ್ನೂ ವ್ಯಯಿಸದೆ ತನ್ನ ಬಳಿ ಇದ್ದ ಡಬಲ್ ಬ್ಯಾರೆಲ್ ಬಂದೂಕಿನಿಂದ ಗುರಿ ಇಟ್ಟಾಗ, ಥ್ಯಾಕರೆಯ ಎದೆಯ ಭಾಗ–ಕ್ಕೆ ಗುಂಡು ತಾಗಿ ಆತ ರಕ್ತದ ಮಡುವಿನಲ್ಲಿ ಬಿದ್ದು ಮೃತಪಟ್ಟ. ಅಂದಿಗೆ ಆ ಯುದ್ಧ ಮುಗಿಯಿತು. ಕಿತ್ತೂರು ಬ್ರಿಟಿಷರ ವಶವಾಗುವುದು ತಪ್ಪಿತು. ಮತ್ತೆ ಕಿತ್ತೂರು ಕೋಟೆ ಮೇಲೆ ನಂದಿಧ್ವಜ ರಾರಾಜಿಸಿತು. ಸೊಕ್ಕಿನಿಂದ ಮೆರೆಯುತ್ತಿದ್ದ ಬ್ರಿಟಿಷರಿಗೆ ಥ್ಯಾಕರೆಯ ಸಾವಿನಿಂದ ತಕ್ಕ ಪಾಠವಾಯಿತು. ಸೋಲಿನ ಸೇಡು ಬ್ರಿಟಿಷರ ಎದೆಯಲ್ಲಿ ಕೊತ ಕೊತ ಕುದಿಯುತ್ತಿತ್ತು. ಬ್ರಿಟಿಷರು 2ನೇ ಬಾರಿ ಕಲೆಕ್ಟರ್ ಚಾಪ್ಲಿನ್ ನೇತೃತ್ವದಲ್ಲಿ ಕಿತ್ತೂರು ಮೇಲೆ ಯುದ್ಧ ಸಾರಿದರು. 1824ರ ಡಿಸೆಂಬರ್ 3ರಂದು ಅಪಾರ ಸೈನ್ಯದೊಂದಿಗೆ ಆಗಮಿಸಿದ ಬ್ರಿಟಿಷರು, ಕಿತ್ತೂರು ಕೋಟೆ ಮೇಲೆ ಭೀಕರ ಆಕ್ರಮಣ ಮಾಡಿದರು.

ಇದೇ ವೇಳೆ ಮಲ್ಲಪ್ಪ ಶೆಟ್ಟಿ, ವೆಂಕಟರಾಯನ ಕುತಂತ್ರದಿಂದ ಮದ್ದಿನಲ್ಲಿ ಮಣ್ಣು, ಸಗಣಿ ಬೆರೆಸಿ, ಕಿತ್ತೂರಿನ ಕೋಟೆ ಮೇಲಿನ ಫಿರಂಗಿಗಳು ಕೆಲಸ ಮಾಡಲಿಲ್ಲ. ಈ ಯುದ್ಧದಲ್ಲೂ ಚನ್ನಮ್ಮಳಿಗೆ ಬೆಂಗಾವಲಾಗಿದ್ದ ಅಮಟೂರು ಬಾಳಪ್ಪ ಶೌರ್ಯದಿಂದ ಕಾದಾಡಿದ. ತನ್ನ ಕೊನೆ ಉಸಿರು ಇರುವವರೆಗೂ ರಾಣಿ ಚನ್ನಮ್ಮಳ ಬಳಿ ಒಬ್ಬನೇ ಒಬ್ಬ ಬ್ರಿಟಿಷ್ ಸೈನಿಕ ಸುಳಿಯದಂತೆ ನೋಡಿಕೊಂಡ. ಹೋರಾಡುತ್ತಲೇ ನಿಶಸ್ತ್ರನಾದ. ಕೊನೆಯಲ್ಲಿ ಚಾಪ್ಲಿನ್ ಚನ್ನಮ್ಮಳಿಗೆ ಗುಂಡು ಹಾರಿಸಲು ಮುಂದಾದಾಗ ಆ ಗುಂಡೇಟಿಗೆ ತನ್ನ ಎದೆ ಕೊಟ್ಟು ನಿಂತು ಹುತಾತ್ಮನಾದ. ಇಂತಹ ಅಪ್ರತಿಮ ವೀರ ಯೋಧನನ್ನು ನಾವು ಇಂದು ನೆನೆಯಲೇಬೇಕು. ಅವರ ಶೌರ್ಯವನ್ನು ಇಡೀ ಜಗತ್ತಿಗೆ ಪರಿಚಯಿಸಬೇಕಾಗಿದೆ.



**– ನಾಗಪ್ಪ ಕೆ ಎಮ್.**
ರಾಜ್ಯ ಸಮಾಚಾರ ಕೇಂದ್ರ, ಹುಬ್ಬಳ್ಳಿ.

### ಉದ್ಯಾನ ಹಾಗೂ ಪ್ರತಿಮೆ ಸ್ಥಾಪನೆ

ಸುವರ್ಣ ಕರ್ನಾಟಕ ಸಂದರ್ಭದಲ್ಲಿ ಅಂದಿನ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಜಗದೀಶ್ ಶೆಟ್ಟರ್ ಅವರು ಅಮಟೂರಿನ ಬಾಳಪ್ಪ ಅವರ ಸ್ಮರಣೆಗಾಗಿ ಅಮಟೂರಿನಲ್ಲಿ ಉದ್ಯಾನ ಹಾಗೂ ಸ್ಮಾರಕವನ್ನು ಸ್ಥಾಪಿಸಿದರು. ಕಂಪೌಂಡ್ ಹಾಗೂ ಪತ್ರಿಮೆ ಸುತ್ತಲೂ ಹಸಿರಿನಿಂದ ಕಂಗೊಳಿಸುವ ಗಿಡಗಳನ್ನು ಕಾಣಬಹುದು. ಇಂತಹ ಮಹಾನ್ ವೀರ ಹೋರಾಟಗಾರನ ಊರಿಗೆ ನೀವು ಕೂಡ ಒಮ್ಮೆ ಭೇಟಿ ನೀಡಿ ಬನ್ನಿ. ಬೆಳಗಾವಿಯಿಂದ ಬೈಲಹೊಂಗಲ 55 ಕಿ.ಮೀ. ಪುನಃ ಅಲ್ಲಿಂದ 5 ಕಿ.ಮೀ. ಸಾಗಿದರೆ ವೀರ ಕೇಸರಿ ಬಾಳಪ್ಪನವರ ಹುಟ್ಟೂರು ಅಮಟೂರು ತಲುಪಬಹುದು.

# ಗಂಗಾಮತಸ್ಥರಿಂದ 77ನೇ ಸ್ವಾತಂತ್ರ್ಯೋತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿ ನಗರದಲ್ಲಿರುವ ಗಂಗಾಮತಸ್ಥರಿಂದ 77ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಸಮಾಜದ ಅಧ್ಯಕ್ಷೆ ಸುಜಾತ ಗುಡಿಸಾಗರ ಧ್ವಜಾರೋಹಣ ನೇರವೇರಿಸಿ ಮಾತನಾಡಿ, ರಾಷ್ಟ್ರದ ಪ್ರಗತಿಯಲ್ಲಿ ಮಹಿಳೆಯರ ಹಾಗೂ ಯುವಕರ ಪಾತ್ರ ಬಹು ಮುಖ್ಯವಾಗಿದೆ. ನಾವೆಲ್ಲ ದೇಶಪ್ರೇಮ ಮೈಗೂಡಿಸಿಕೊಂಡು, ಸ್ವಾತಂತ್ರ್ಯ ಕೊಡಿಸಿದ ಮಹಾತ್ಮರನ್ನು ಸ್ಮರಿಸೋಣ ಎಂದರು.

ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಸಮಾಜದ ಯುವ ಮುಖಂಡ ಹರೀಶ ಬಾರಕೇರ ಮಾತನಾಡಿ, ನಮ್ಮೆಲ್ಲರ ಬಾಳಿಗೆ ಬೆಳಕು ನೀಡಿದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಸ್ಮರಿಸಿ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮರ ವಿಚಾರಗಳನ್ನು ಚಿಂತನ ಮಂಥನ ಮಾಡುವುದರೊಂದಿಗೆ ಜೀವನದಲ್ಲಿ ಅಳವಡಿಸಿಕೊಂಡಾಗ ಸಾರ್ಥಕತೆ ಬರುವುದು ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಸಮಿತಿ ಮೀನುಗಾರರ ವಿಭಾಗದ ಶಹರ ಘಟಕದ ಅಧ್ಯಕ್ಷ ಸಂಗಮೇಶ ಹಾದಿಮನಿ, ಸಮಾಜದ ಯುವ ಘಟಕದ ಅಧ್ಯಕ್ಷ ಮಂಜುನಾಥ ಗುಡಿಸಾಗರ, ಸಮಾಜ ಟ್ರಸ್ಟ್ ಸಹಕಾರ್ಯದರ್ಶಿ ರವಿಕುಮಾರ ಗುಡಿಸಾಗರ, ಮಹಿಳಾ ಪದಾಧಿಕಾರಿಗಳಾದ ಗಿರಿಜಾ ಬಾರಕೇರ, ಶಂಕುತಲಾ ಉಮಚಗಿ, ಆನಂದ ಸುಣಗಾರ, ಕವಿತಾ ಗುಡಿಸಾಗರ ಸೇರಿದಂತೆ ಪದಾಧಿಕಾರಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





ಗದಗ–ಬೆಟಗೇರಿ ನಗರಸಭೆಯಲ್ಲಿ 77ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಪೌರಾಯುಕ್ತ ರಮೇಶ ಸುಣಗಾರ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ನಗರಸಭಾಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಅಭಿಯಂತರರಾದ ಬಂಡಿವಡ್ಡರ, ಕಚೇರಿ ವ್ಯವಸ್ಥಾಪಕ ಪರಶುರಾಮ ಶೇರಖಾನೆ, ಎ.ಎನ್ ಪುಣೇಕರ, ಪರಿಸರ ಅಭಿಯಂತರ ಆನಂದ ಬದಿ, ಎಂ.ಎಂ ಮಕಾನದಾರ, ಕೆಂಚಪ್ಪ ಪೂಜಾರ ಸೇರಿದಂತೆ ನಗರಸಭೆಯ ಎಲ್ಲ ಸಿಬ್ಬಂದಿವರ್ಗದವರು ಹಾಜರಿದ್ದರು.



ಲಕ್ಷ್ಮೇಶ್ವರ ತಾಲೂಕಿನ ಗೊಜನೂರಿನ ಮೊರಾರ್ಜಿ ವಸತಿ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಭಾರತ ನಕ್ಷೆ ರಚನೆಯ ದೃಶ್ಯ ಗಮನ ಸೆಳೆಯಿತು. ಪ್ರಾಚಾರ್ಯ ಎನ್.ಕೆ ಹತ್ತಿಕಾಳ, ನಾರಾಯಣ ಹೊಸೂರ, ಕೆ.ಪಿ ಪಾಟೀಲ, ಅಮೀರ ನದಾಪ ಸೇರಿದಂತೆ ಶಿಕ್ಷಕರು, ಸಿಬ್ಬಂದಿಗಳು, ವಿದ್ಯಾರ್ಥಿಗಳಿದ್ದರು.

# ತ್ಯಾಗ ಬಲಿದಾನದ ಸಂಕೇತವೇ ಸ್ವಾತಂತ್ರ್ಯ



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸ್ವಾತಂತ್ರ್ಯವೆಂಬುದು ಬರಿಯ ಪದವಲ್ಲ. ನಮ್ಮ ಪೂರ್ವಜರ ತ್ಯಾಗ, ಬಲಿದಾನಗಳ ಸಂಕೇತ ಎಂದು ರಾಮಣ್ಣಾ ಕಮಾಜಿ ಹೇಳಿದರು.

ಅವರು ಪಟ್ಟಣದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ.1ರಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಸಾವಿರಾರು ಮಹನೀಯರ ತ್ಯಾಗ ಬಲಿದಾನದಿಂದ ನಮಗೆ ಸ್ವಾತಂತ್ರ್ಯ ದಕ್ಕಿದ್ದು, ಅದನ್ನು ಉಳಿಸಿಕೊಂಡು ಹೋಗಬೇಕು. ಇಂದಿನ ಮಕ್ಕಳೇ ಮುಂದಿನ ಭವಿಷ್ಯದ ಪ್ರಜೆಗಳು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ವಿ.ಡಿ ಸಿದ್ದನಗೌಡರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪಾಧ್ಯಕ್ಷೆ ರೇಷ್ಮಾಭಾನು ನದ್ದಿಮುಲ್ಲಾ, ಜಿ.ಎಂ ಗಾಡಿ, ಇಸ್ಮಾಯಿಲ್ ಖಾಗದ, ಎಂ.ಎ ನದ್ದಿಮುಲ್ಲಾ, ಮಂಜುನಾಥ ಗುಲಗಂಜಿ, ಬಿ.ಎಲ್ ಜಾಧವ, ಶಿವಪ್ಪ ಮಡ್ಡಿ, ಡಿ.ಎಫ್ ಸುಂಕದ, ಗೀತಾ ಕಾಳೆ, ಎಫ್.ಆರ್ ಸಿದ್ದಿ, ಅರ್ಪನಾ ನದ್ದಿಮುಲ್ಲಾ, ದಾವಲಬಿ ಗಾಡಿ, ಸಾವಿತ್ರಿ ಇಂಗಳಹಳ್ಳಿ, ಲಲಿತಾ ಮಲ್ಲಿಕಾರ, ನಾಗಮ್ಮಾ ಕಣವಿ, ನಿರ್ಮಲಾ ಉಡಚಗೌಣ್ಣವರ, ರಮೇಶ ಮ್ಯಾಗೇರಿ, ಶಾಲಾ ಪ್ರಧಾನ ಗುರು ಪಿ.ಬಿ ಕೆಂಚನಗೌಡರ, ಕೆ.ಎಂ ಹೆರಕಲ್ಲ, ಎಂ.ಎಂ ಕೊಪ್ಪಳ, ಎಂ.ಎಂ ಮೇಗಲಮನಿ, ಸೇರಿದಂತೆ ಶಾಲಾ ಶಿಕ್ಷಕ ವೃಂದದವರಿದ್ದರು.

# ರಾಷ್ಟ್ರದ ಐಕ್ಯತೆ, ಸಾಮರಸ್ಯ ಕಾಪಾಡುವ ಸಂಕಲ್ಪವಾಗಲಿ

■ ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು



ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿ ರಾಷ್ಟ್ರದ ಐಕ್ಯತೆ, ಸಾಮರಸ್ಯ ಕಾಪಾಡಿಕೊಂಡು ಹೋಗುವ ಸಂಕಲ್ಪ ನಮ್ಮದಾಗಬೇಕು ಎಂದು ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನದಿಂದ ಜರುಗಿದ 77ನೇ ಸ್ವಾತಂತ್ರ್ಯ ದಿನಾಚರಣೆಯಂದು ರಾಷ್ಟ್ರಧ್ವಜಾರೋಹಣ ಮಾಡಿ ಆಶೀರ್ವಚನ ನೀಡುತ್ತಿದ್ದರು.

ಹಲವಾರು ಮುತ್ಸದ್ದಿಗಳ, ದೇಶಪ್ರೇಮಿಗಳ ತ್ಯಾಗ–ಬಲಿದಾನದಿಂದಾಗಿ ರಾಷ್ಟ್ರವು ಬ್ರಿಟಿಷ್‌ರ ದಾಸ್ಯದಿಂದ ಹೊರಬಂದು ಸ್ವತಂತ್ರವಾಗಿದೆ. ಸ್ವಾತಂತ್ರ್ಯದ ನಂತರ ಈ ದೇಶ ಪ್ರಗತಿ ಪಥದಲ್ಲಿ ನಡೆಯುತ್ತಿರುವುದು ಶುಭೋದಯದ ಸಂಕೇತವಾಗಿದೆ. ರಾಷ್ಟ್ರಧ್ವಜದಲ್ಲಿರುವ ಕೇಸರಿ, ಬಿಳಿ, ಹಸಿರು ಬಣ್ಣಗಳು ಭಾವೈಕ್ಯತೆಯ ಸಂಕೇತಗಳಾದರೆ, ಅಶೋಕ ಚಕ್ರ ಅಹಿಂಸೆಯ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಿದೆ. ವೈಯಕ್ತಿಕ ಹಿತಾಸಕ್ತಿಗಳಿಂದಾಗಿ ದೇಶದ ಸುಭದ್ರತೆಗೆ ಯಾವುದೇ ಧಕ್ಕೆಯಾಗಬಾರದು. ದೇಶದ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಸ್ವಾಭಿಮಾನ ಬೆಳೆದು ಬಂದರೆ, ಎಂತಹ ಕಠಿಣ ಪರಿಸ್ಥಿತಿಯನ್ನೂ ಎದುರಿಸಬಹುದಾಗಿದೆ. ರಾಷ್ಟ್ರದ ಎಲ್ಲ ಜನತೆ ಸುಖ, ಸಂತೋಷಗಳಿಂದ ಬಾಳಲಿ. ದೇಶ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಮಹೇಶ್ ಆಚಾರ್, ಜಗದೀಶ್ಚಂದ್ರ, ಕೋಕಿಲಮ್ಮ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ದೈಹಿಕ ಶಿಕ್ಷಕ ನಿಜಗುಣಿ ಕಟ್ಟೇಗೌಡರ ಶ್ರೀ ರಂಭಾಪುರಿ ಜಗದ್ಗುರುಗಳನ್ನು ಆಹ್ವಾನಿಸಿ ಧ್ವಜಾರೋಹಣ ಮಾಡಲು ಸಹಕರಿಸಿದರು. ಶಾಲಾ ಮಕ್ಕಳಿಂದ ರಾಷ್ಟ್ರಗೀತೆ, ಮುಖ್ಯೋಪಾಧ್ಯಾಯೆ ಸುಜಾತಾ ಅಳವಂಡಿ ಇವರಿಂದ ಸ್ವಾಗತ, ಶಿಕ್ಷಕ ವೀರೇಶ ಕುಲಕರ್ಣಿ ಇವರಿಂದ ನಿರೂಪಣೆ ಜರುಗಿತು.

**ವಿಧಾನಸೌಧದ ಮುಂಭಾಗದಲ್ಲಿ ಧ್ವಜಾರೋಹಣ ನೆರವೇರಿಸಿದ ಸಭಾಪತಿ ಬಸವರಾಜ ಹೊರಟ್ಟಿ**

# ದೇಶ ಕಟ್ಟುವಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳೋಣ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು



ಭಾರತಕ್ಕೆ ಸ್ವಾತಂತ್ರ್ಯ ಸುಮ್ಮನೆ ಬಂದಿಲ್ಲ. ಲಕ್ಷಾಂತರ ಭಾರತೀಯರ ಅಮೂಲ್ಯ ಜೀವ ಬಲಿದಾನದ ಫಲದಿಂದಾಗಿ ಭಾರತ ಸ್ವಾತಂತ್ರ್ಯ ಪಡೆದು 77 ವರ್ಷವಾಯಿತು. ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರುವುದರೊಂದಿಗೆ ಅವರ ಕುಟುಂಬಕ್ಕೆ ನಾವು ಸದಾ ಚಿರಋಣಿಯಾ ಗಿರಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯ ಎಂದು ಸಭಾಪತಿ ಬಸವರಾಜ ಹೊರಟ್ಟಿ ನುಡಿದರು.

ಮಂಗಳವಾರ ಬೆಳಿಗ್ಗೆ ಶಾಸಕರ ಭವನದಲ್ಲಿ 77ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನೆರವೇರಿಸಿದ ನಂತರ ಮಾತನಾಡಿದ ಅವರು, ಕಳೆದ 77 ವರ್ಷಗಳಿಂದ ಭಾರತ ಸಾಕಷ್ಟು ಅಭಿವೃದ್ಧಿಯನ್ನು ಹೊಂದುವ ಮೂಲಕ ವಿಶ್ವದ ಬಲಿಷ್ಠ ರಾಷ್ಟ್ರವಾಗಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ. ವಿಶ್ವಗುರು ಆಗುವಲ್ಲಿ ದಾಪುಗಾಲು ಇಡುತ್ತಿರುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ಸಂಗತಿ. ಇಡೀ ಜಗತ್ತು ಭಾರತದತ್ತ ನೋಡುತ್ತಿರುವುದು ನಮಗೆಲ್ಲ ಅಭಿಮಾನದ ಸಂಗತಿ. ದೇಶ ಕಟ್ಟುವಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳೋಣ. ಸಾಕಷ್ಟು ಹಿರಿಯರ ಶ್ರಮದಿಂದ ಹಾಗೂ ಲಕ್ಷಾಂತರ ಜನರ ಬಲಿದಾನದಿಂದ ನಮಗೆಲ್ಲ ಇಂದು ಸ್ವಾತಂತ್ರ ಸಿಕ್ಕಿದೆ. ಸ್ವಾತಂತ್ರ್ಯ ಎನ್ನುವುದು ಬಹುದೊಡ್ಡ ಆಸ್ತಿ. ಅದು ಕಳೆದುಹೋಗುವವರೆಗೂ ಅದರ ಬೆಲೆ ಅರ್ಥವಾಗುವುದಿಲ್ಲ. ಅದು ಒಮ್ಮೆ ಕಳೆಯಿತೆಂದರೆ ಮರಳಿ ಪಡೆಯಲು ಅದರ ಹತ್ತರಷ್ಟು ಬೆಲೆ ಕಟ್ಟಬೇಕಾಗುತ್ತದೆ. ಅದರ ಮೌಲ್ಯ ಅರಿತು ಹಿರಿಯರು ತಂದುಕೊಟ್ಟ ಸ್ವಾತಂತ್ರವನ್ನು ಕಾಪಾಡಿಕೊಂಡು ದೇಶಾಭಿಮಾನವನ್ನು ಹೆಚ್ಚಿಸಿಕೊಂಡು ಭವ್ಯ ಭಾರತ ಕಟ್ಟುವತ್ತ ಸಂಕಲ್ಪ ಮಾಡೋಣ ಎಂದರು.

ಈ ಸಂದರ್ಭದಲ್ಲಿ ವಿಧಾನಸಭಾ ಉಪಾಧ್ಯಕ್ಷರಾದ ರುದ್ರಪ್ಪ ಲಮಾಣಿ, ವಿ ಪ ಕಾರ್ಯದರ್ಶಿ ಮಹಾಲಕ್ಷ್ಮೀ, ವಿಧಾನಸಭಾ ಕಾರ್ಯದರ್ಶಿ ವಿಶಾಲಾಕ್ಷಿ, ವಿ ಪ ಅಪರ ಕಾರ್ಯದರ್ಶಿ ಎಸ್ ನಿರ್ಮಲಾ, ಸಭಾಪತಿಗಳ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ, ಸಭಾಪತಿ ಅವರ ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಳ್ವೆಕರ್ ಸೇರಿದಂತೆ ಗಣ್ಯರು, ಹಿರಿಯ ಅಧಿಕಾರಿ ವೃಂದದವರು ಉಪಸ್ಥಿತರಿದ್ದರು.

# ದೇಶದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸೋಣ

■ ವಿಜಯಸಾಕ್ಷಿ ಸುದ್ದಿ, ಗದಗ



ಈ ದಿನವಷ್ಟೇ ಸ್ವಾತಂತ್ರ್ಯ ಹೋರಾಟಗಾರರನ್ನು ನೆನೆಯದೇ, ಅವರ ತ್ಯಾಗ–ಬಲಿದಾನಗಳನ್ನು ಪ್ರತೀ ಕ್ಷಣವೂ ಸ್ಮರಿಸಿಕೊಂಡು ದೇಶದ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ಮುಖ್ಯ ಡಾ. ಶಶಿಧರ ರೇಷ್ಮೆ ಕರೆ ನೀಡಿದರು.

ಸ್ವಾತಂತ್ರ್ಯ ದಿನದ ಅಂಗವಾಗಿ ಸಂಕನೂರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜು ಹಾಗೂ ಆಸ್ಪತ್ರೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಹೋರಾಟಗಾರರೂ ಬ್ರಿಟಿಷರ ವಿರುದ್ಧ ಹೋರಾಡಿ ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿದ್ದು, ಅವರ ತ್ಯಾಗವನ್ನು ನಾವು ಮರೆಯಬಾರದು. ಅವರ ಆದರ್ಶಗಳನ್ನು ಸ್ಮರಿಸಿ, ನಾವೆಲ್ಲರೂ ದೇಶದ ಪ್ರಗತಿಗೆ ಹೋರಾಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಶ್ವೇತಾ ಪ್ರಕಾಶ ಸಂಕನೂರ ಮಾತನಾಡಿ, ದೇಶದ ಅಭಿವೃದ್ಧಿಗೆ ಜನತೆ ಎಷ್ಟು ಮುಖ್ಯವೋ, ಆರೋಗ್ಯವು ಅಷ್ಟೇ ಮುಖ್ಯ. ಆದ್ದರಿಂದ ಆರೋಗ್ಯ ವೃದ್ಧಿಯೊಂದಿಗೆ ದೇಶದ ಪ್ರಗತಿಗೆ ಎಲ್ಲರೂ ಕಾರಣರಾಗಬೇಕೆಂದು ಹೇಳಿದರು. ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಮೀನಾಕ್ಷಿ ದೇವಾಂಗಮಠ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣರಾದ ಹುತಾತ್ಮರನ್ನು ನಾವು ಮರೆಯಬಾರದು ಎಂದು ಹೇಳಿದರು.

ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಕಿರುನಾಟಕ, ನೃತ್ಯ, ಫ್ಯಾನ್ಸಿಡ್ರೆಸ್, ದೇಶಭಕ್ತಿ ಗೀತೆ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ಚೇತನಾ ಅನಿಲ ಸಂಕನೂರ ಸೇರಿದಂತೆ ನರ್ಸಿಂಗ್ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. ರಶ್ಮಿ ವಿನ್ಸೆಂಟ್ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಆಡಳಿತ ಅಧಿಕಾರಿ ವಿನ್ಸೆಂಟ್ ಪಾಟೀಲ ಸ್ವಾಗತಿಸಿ, ವಂದಿಸಿದರು.

# CITU, KPRS, AIAWU ವತಿಯಿಂದ ಸ್ವಾತಂತ್ರ್ಯೋತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ



ನಗರದ ಮಹಾತ್ಮಾ ಗಾಂಧಿ ವೃತ್ತದಲ್ಲಿ CITU, KPRS AIAWU ವತಿಯಿಂದ 77ನೇ ಸ್ವಾತಂತ್ರೋತ್ಸವದ ಧ್ವಜಾರೋಹಣ ನೆರವೇರಿಸಿ, ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಕಾರ್ಮಿಕ ಮುಖಂಡ ಮಹೇಶ ಹಿರೇಮಠ ಧ್ವಜಾರೋಹಣ ನೆರವೇರಿಸಿದರು.

ಸಭಾ ಕಾರ್ಯಕ್ರಮವನ್ನು ಪ್ರಗತಿಪರ ಸಾಹಿತಿ, ದಲಿತ ಹೋರಾಟಗಾರ ವೆಂಕಟೇಶಯ್ಯನವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಉಪನ್ಯಾಸಕ ಬಸವರಾಜ ಪೂಜಾರ ಬಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳ ಅಂಗನವಾಡಿ, ಗ್ರಾಮ ಪಂಚಾಯಿತಿ, ಅಕ್ಷರದಾಸೋಹ ನೌಕರರು, ಕಟ್ಟಡ ಕಾರ್ಮಿಕರು ಹಾಗೂ ರೈತ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ವೇದಿಕೆಯ ಮೇಲೆ ಸಾವಿತ್ರಿ ಸಬ್ನಿಸ್, ಶಾರದಾ ರೋಣದ, ಬಸವರಾಜ ಮಂತೂರ, ರುದ್ರಪ್ಪ ಗಂದಗಲ್, ಯಶೋಧಾ ಬೆಟಗೇರಿ ಮುತ್ತಪ್ಪ ಚಲವಾದಿ, ಮಾರುತಿ ಚಿಟಗಿ, ಮುರಘೇಶ ಕರಕಿಕಟ್ಟಿ, ಶಾರದಾ ಹಳೆಮನಿ, ಗಂಗಮ್ಮ ದ್ಯಾವರಡ್ಡಿ, ಮಮಗಳಾ ಪಟ್ಟಣಶಟ್ಟಿ, ಡಿ ಎಚ್ ರಡ್ಡೇರ, ಸುಶೀಲಾ ಚಲವಾದಿ ಬಿಳಿಗಿಮಠ, ಜಯಶ್ರೀ ಹಿರೇಗೌಡರ, ಅಶ್ವಿನಿ ಉಳ್ಳಾಗಡ್ಡಿ, ನಾಗರತ್ನ ಬಡಗನ್ನವರ, ಯಮುನಾ ಗೋಟೂರ, ರುದ್ರಗೌಡ ಸಂಕನಗೌಡರ, ದೇವಪ್ಪ ಕಲ್ಮನಿ, ಸಾವಿತ್ರಿ ಬಡ್ನಿ ಮುಂತಾದವರು ಭಾಗವಹಿಸಿದ್ದರು.

CITU ಜಿಲ್ಲಾ ಸಹ ಸಂಚಾಲಕರಾದ ಕಾಮ್ರೆಡ್ ಮಾರುತಿ ಚಿಟಗಿಯವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ರೈತರ ಬದುಕಿನೊಂದಿಗೆ ಆಟವಾಡಬೇಡಿ

▶▶ಮೊದಲನೇ ಪುಟದಿಂದ

ಅನಿಯಮಿತವಾಗಿ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತಿದೆ. 2 ದಿನದಲ್ಲಿ ಉಂಟಾಗಿರುವ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಲಾಗುವುದು. ರೈತರ ಸಹಕಾರವೂ ಅಗತ್ಯವಾಗಿದೆ ಎಂದು ಮನವಿ ಮಾಡಿದರು.

ಬಳಿಕ ಅಸಮಾಧಾನದ ನಡುವೆಯೇ ರೈತರು ಮನವಿ ನೀಡಿ ಪ್ರತಿಭಟನೆಯನ್ನು ಕೈಬಿಟ್ಟರು. ಈ ವೇಳೆ ರೈತರಾದ ನೀಲಪ್ಪ ತೆಗ್ಗಿನಹಳ್ಳಿ, ಪ್ರಕಾಶ ಶಿರಹಟ್ಟಿ, ಅಶೋಕ ಮುಳಗುಂದ, ಮಾಣಪ್ಪ ಲಮಾಣಿ, ಮೋಹನ ನಂದೆಣ್ಣವರ, ಸುರೇಶ ಲಮಾಣಿ, ಪರಮೇಶ ಲಮಾಣಿ, ಶಿವಪ್ಪ ಲಮಾಣಿ, ಯಲ್ಲಪ್ಪ ಪೂಜಾರಿ, ತಿರಕಪ್ಪ ಸುಣಗಾರ, ಯಲ್ಲಪ್ಪ ಉಮಚಗಿ, ಎಸ್.ಸಿ ಗಿಡಿಬಿಡಿ, ಎನ್.ಜಿ ಸವಣೂರ, ಎನ್.ಎಚ್ ದೊಡ್ಡಮನಿ, ಯಲ್ಲಪ್ಪ ಮರಾಠೆ ಸೇರಿದಂತೆ ನೂರಾರು ರೈತರಿದ್ದರು.

# ಜಿಮ್ ಸ್ಥಾಪನೆಗೆ ಸಹಾಯಧನ

▶▶ಮೊದಲನೇ ಪುಟದಿಂದ

ಕ್ರೀಡಾಪಟುಗಳು ಅಂತರರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕ ವಿಜೇತರಾಗಿರಬೇಕು.

ಜಿಮ್ ಸಲಕರಣೆಗಳನ್ನು ಕರ್ನಾಟಕದ ಕ್ರೀಡಾಪಟುಗಳಿಗೆ ಮಾತ್ರ ನೀಡಲಾಗುವುದು. ಬ್ಯಾಂಕ್ ಖಾತೆ ಕಡ್ಡಾಯವಾಗಿ ಕ್ರೀಡಾಪಟುವಿನ ಹೆಸರಿನಲ್ಲಿರಬೇಕು. ಬ್ಯಾಂಕ್ ಪಾಸ್ ಪುಸ್ತಕದ ಮುಖಪುಟದ ಜೆರಾಕ್ಸ್ ಪ್ರತಿ ಲಗತ್ತಿಸಬೇಕು (ಹೆಸರು, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ. ಕೋಡ ಇರುವ ಪುಟ) ಜಿಮ್ ಸ್ಥಾಪಿಸಲು ಅರ್ಜಿಯನ್ನು ಸಲ್ಲಿಸುವ ಕ್ರೀಡಾಪಟುಗಳು ಜಿಮ್ ಸ್ಥಾಪಿಸುವ ಸೂಕ್ತವಾದ ಸ್ಥಳಾವಕಾಶ ಹಾಗೂ ಕಟ್ಟಡದ ಸಂಪೂರ್ಣ ದಾಖಲೆಗಳನ್ನು ಸಲ್ಲಿಸುವುದು. ಸಂಪೂರ್ಣ ದಾಖಲೆಗಳು ಇಲ್ಲದಿದ್ದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿದಾರರು ಸ್ಥಳೀಯವಾಗಿ ಯಾವುದೇ ಅಪರಾದ ಹಿನ್ನೆಲೆ ಉಳ್ಳವರಾಗಿರದ ಬಗ್ಗೆ ಸ್ವಯಂ ದೃಢೀಕರಿಸಿ ಸಲ್ಲಿಸುವುದು. ಕ್ರೀಡಾಪಟುಗಳು ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕಕ್ಕೆ 40 ವರ್ಷ ವಯಸ್ಸನ್ನು ಮೀರಿರಬಾರದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ದೂರವಾಣಿ ಸಂಖ್ಯೆ 08372– 238345 ರ ಮೂಲಕ ಸಂಪರ್ಕಿಸಬಹುದಾಗಿದೆ.

# ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ ನೀಡಲು ಅರ್ಜಿ ಆಹ್ವಾನ

▶▶ಮೊದಲನೇ ಪುಟದಿಂದ

ಭಾಗವಹಿಸಿ ಹಾಗೂ ಪದಕ ಪಡೆದವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಉಳಿದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ಪಡೆದಿರುವವರು ಅರ್ಹರಿರುವುದಿಲ್ಲ. ಕ್ರೀಡಾಪಟುಗಳು ಆಧಾರ ಕಾರ್ಡ್, ಪಡಿತರ ಚೀಟಿ,(Ration Card ) ಹಾಗೂ ಆರ್.ಡಿ. ಸಂಖ್ಯೆಯನ್ನು ಒಳಗೊಂಡ ಜಾತಿ ಮತ್ತು ಆದಾಯ ಪ್ರಯಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

ಆಸಕ್ತ ಕ್ರೀಡಾಪಟುಗಳು ಸೆಪ್ಟೆಂಬರ್ 16 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕು.

ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಗದಗ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 08372– 238345 ರ ಮೂಲಕ ಸಂಪರ್ಕಿಸಬಹುದಾಗಿದೆ.

# ಆ.22ಕ್ಕೆ ವ್ಯಾಜ್ಯ ಪೂರ್ವ ಪ್ರಕರಣಗಳ ರಾಜೀ ಸಂಧಾನ

■ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ಲೋಕ ಅದಾಲತ್ ಹಿನ್ನೆಲೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಯೂನಿಯನ್ ಬ್ಯಾಂಕ್ (ಜೆ.ಟಿ ಮಠ ಶಾಖೆ) ಸಾಲಗಳಿಗೆ ಸಂಬಂಧಪಟ್ಟ ವ್ಯಾಜ್ಯ ಪೂರ್ವ ಪ್ರಕರಣಗಳಿಗಾಗಿ (P.L.C. Cases) ಆಗಸ್ಟ್ 22ರಂದು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ಎಡಿಆರ್ ಕಟ್ಟಡದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಛೇರಿಯಲ್ಲಿ ರಾಜೀ ಸಂಧಾನ ನಿಗದಿಪಡಿಸಿದೆ. ಸಾಲದ ಬಾಕಿ ಹಣಕ್ಕೆ ಸಂಬಂಧಿಸಿದಂತೆ ಸಾಧ್ಯವಾದಷ್ಟು ರಿಯಾಯಿತಿಯನ್ನು ಕೊಡಲು ಸದರಿ ಬ್ಯಾಂಕ್‌ನವರು ಮುಂದೆ ಬಂದಿದ್ದಾರೆ.

ಕಾರಣ, ಈಗಾಗಲೇ ನೋಟೀಸ್ ಕಳಿಸಲಾಗಿದ್ದು, ನೋಟೀಸ್ ಮುಟ್ಟಿದ ಪಕ್ಷಗಾರರು ಸದರಿ ದಿನದಂದು ಹಾಜರಾಗಿ, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಕೆ. ಗುರುಪ್ರಸಾದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಸ್ಮರಣೀಯ

# ಯೋಧನಾಗಿ ಸೇವೆ ಮಾಡಲು ಪುಣ್ಯ ಮಾಡಿರಬೇಕು

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ





ಜಾತಿ–ಧರ್ಮ, ಮತ–ಪಂಥವನ್ನು ನೋಡದೇ ಎಲ್ಲರೂ ಭಾರತೀಯರೇ ಎಂದು ಭಾವಿಸಿ ಯೋಧನಾಗಿ ಅಖಂಡ ದೇಶದ ಜನರಿಗಾಗಿ ಸೇವೆ ಮಾಡಲು ಪುಣ್ಯ ಮಾಡಿರಬೇಕು. ಅಂತಹ ಅವಕಾಶವನ್ನು ಪಡೆದ ನಾನೇ ಭಾಗ್ಯವಂತ ಎಂದು ಹಿಮಾಚಲ ಪ್ರದೇಶದಲ್ಲಿ ಸೈನಿಕವಾಗಿ ಸೇವೆ ಸಲ್ಲಿಸುತ್ತಿರುವ ಗೋಗೇರಿ ಗ್ರಾಮದ ಯುವಕ ಮಲ್ಲಿಕಾರ್ಜುನ ಪಾಟೀಲ ಹೇಳಿದರು.

ಪಟ್ಟಣದ ಪುರ್ತಗೇರಿ ಕ್ರಾಸ್ ಬಳಿ ಇರುವ ಶ್ರೀ ಅನ್ನದಾನೇಶ್ವರ ಶಿಕ್ಷಣ ಸಂಸ್ಥೆಯಿಂದ ಮಂಗಳವಾರ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು.

ಇದೆ ಅನ್ನದಾನೇಶ್ವರ ಪಿಯು ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪ್ರಥಮ ಪಿಯುಸಿ ಫೇಲಾದಾಗ ಇಲ್ಲಿನ ಶಿಕ್ಷಕರು ಆತ್ಮಸ್ಥೈರ್ಯ ತುಂಬಿದರು. ಸ್ವಂತ ಮಕ್ಕಳಂತೆ ಕಾಳಜಿ ವಹಿಸಿ ಚೆನ್ನಾಗಿ ಓದುವಂತೆ ಪ್ರೋತ್ಸಾಹ ನೀಡಿದರು. ಬರಿ ಓದಿನ ಬಗ್ಗೆ ಅಲ್ಲದೆ ಜೀವನದಲ್ಲಿ ಬದುಕುವ ಕಲೆ, ದೇಶ ಹಾಗೂ ದೇಶಾಭಿಮಾನದ ಬಗ್ಗೆ ಬೋಧನೆ ಮಾಡಿದರು. ಆದ್ದರಿಂದ ಕೊನೆಯ ಸಾಲಿನಲ್ಲಿ ಕುಳಿತು ಕಾಮೆಂಟ್ ಮಾಡುತಿದ್ದ ನಾನು ಸೈನಿಕನಾಗಲು ಕಾರಣವಾಗಿದೆ ಎಂದರು. ದೇಶ ಸೇವೆ ಮಾಡಲು ಪ್ರೋತ್ಸಾಹ, ಮಾರ್ಗದರ್ಶನ ನೀಡಿದ ತಂದೆ–ತಾಯಿ, ಗುರುಗಳಿಗೆ ಹಾಗೂ ಸ್ನೇಹಿತರಿಗೆ ನಾನು ಚಿರಋಣಿಯಾಗಿರುವೆ ಎಂದರು.

ಗಜೇಂದ್ರಗಡ ಪಟ್ಟಣದ ಹಿರಿಯರಾದ ಪ್ರಭು ಎನ್. ಚವಡಿ ಮಾತನಾಡಿ, ಭಾರತ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಾವು ಪ್ರಾಣ ತ್ಯಾಗ ಮಾಡಿರುವ ಮಹನೀಯರನ್ನು ಸ್ಮರಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ಭಾರತೀಯರ ಒಗ್ಗಟ್ಟು ಮುರಿಯುವ ಬ್ರಿಟಿಷರ ತಂತ್ರವನ್ನು ಮೆಟ್ಟಿ ನಿಂತು ಸಾಮಾಜಿಕ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳ ನಡುವೆ ಭಾರತೀಯರು ಏಕತೆಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಅವರ ಹೋರಾಟವನ್ನು ಪ್ರತಿಯೊಬ್ಬರೂ ಸ್ಮರಿಸುತ್ತಾ, ಅವರ ಆದರ್ಶ ಮತ್ತು ಸಂದೇಶಗಳನ್ನು ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳಿಗೆ ತಿಳಿಸಿ, ಅವರಲ್ಲಿ ರಾಷ್ಟ್ರಪ್ರೇಮವನ್ನು ಬೆಳೆಸಬೇಕೆಂದು ತಿಳಿಸಿದರು.

ಈ ವೇಳೆ ಅನೇಕ ಗಣ್ಯರು, ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಪ್ರಾಥಮಿಕ ಶಾಲೆಯ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣಗಳನ್ನು ಧರಿಸಿ ಕಾರ್ಯಕ್ರಮ್ಮಕೆ ಮೆರಗು ತಂದರು.

ಈ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಎಸ್. ಎಸ್. ಪಟ್ಟೇದ, ಎಸ್. ಸಿ. ಚಕ್ಕಡಿಮಠ, ಪಿಯು ಪ್ರಾಚಾರ್ಯ ವಸಂತರಾವ್ ಗಾರಗಿ, ಪದವಿ ಪ್ರಾಚಾರ್ಯ ಬಸಯ್ಯ ಹಿರೇಮಠ, ಐಟಿಐ ಪ್ರಾಚಾರ್ಯ ಎ. ಪಿ. ಗಾಣಗೇರ, ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಮಂಜುನಾಥ ಕ್ಯಾಡದ, ಸಿಬ್ಬಂದಿಗಳು, ವಿದ್ಯಾರ್ಥಿಗಳು, ಪಾಲಕರು ಇದ್ದರು.

# ಪ್ರಭಾತಕುಮಾರರ ಸೇವೆ ಸಮಾಜಕ್ಕೆ ಮಾದರಿ



■ವಿಜಯಸಾಕ್ಷಿ ಸುದ್ದಿ, ಗದಗ

ಸಂತಸ–ಸಂಭ್ರಮವೆಂದರೆ ಅದು ಮಾರುಕಟ್ಟೆಯಲ್ಲಿ ಸಿಗುವ ವಸ್ತುಗಳಲ್ಲ. ಒಬ್ಬರಿಗೊಬ್ಬರು ಪರಸ್ಪರ ಸಂಬಂಧದ ಪ್ರೀತಿಯನ್ನು ಇಂತಹ ಸಂದರ್ಭದಲ್ಲಿ ಹಂಚಿಕೊಳ್ಳುವುದು ನಿಜವಾದ ಪ್ರೀತಿ ಬೆಸುಗೆಯ ಭಾಂದವ್ಯವಾಗಿದೆ. ನಿವೃತ್ತ ಉಪ ತಹಸೀಲ್ದಾರ ಪ್ರಭಾತಕುಮಾರ ತೋಟಪ್ಪ ನಾರಾಯಣಪುರರ ಪ್ರೀತಿಯ ಸೇವೆಯು ಇಂದಿನ ಸಮಾಜಕ್ಕೆ ಮಾದರಿಯಾಗಿದೆ ಎಂದು ಶರಣ ಸಾಹಿತಿ ಅಂದಾನೆಪ್ಪ ವಿಭೂತಿ ಹೇಳಿದರು.

ಪ್ರಭಾತಕುಮಾರ ತೋಟಪ್ಪ ನಾರಾಯಣಪುರರ ಜನ್ಮದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದಿವ್ಯ ಸಾನ್ನಿಧ್ಯವನ್ನು ವಹಿಸಿದ ಗದುಗಿನ ಅಡವೀಂದ್ರ ಮಠದ ಪೂಜ್ಯ ಮಹೇಶ್ವರ ಶ್ರೀಗಳು ಮಾತನಾಡಿ, ಲಿಂ. ತೋಟಪ್ಪ ನಾರಾಯಣಪುರರವರು ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರಲ್ಲೊಬ್ಬರು. ಅವರ ಬದುಕು ಸಮಾಜಕ್ಕೆ ದಾರಿ ತೋರುವ ಬೆಳಕಾಗಿದೆ ಎಂದರು.

ಇದೇ ಸಂದರ್ಭದಲ್ಲಿ ನೇತ್ರಾವತಿ ಅಂಗಡಿ ಡಾಕ್ಟರೇಟ್ ಪದವಿ ಪಡೆದ ನಿಮಿತ್ತ ದಂಪತಿಗಳನ್ನು ಗೌರವಿಸಿ, ಸನ್ಮಾನಿಸಲಾಯಿತು.

ಹಿರಿಯರಾದ ಕೆ.ಎಚ್ ಬೇಲೂರ, ಬಿ.ಎಂ ಬಿಳೆಯಲಿ, ಕಿಲುಬನವರ, ಗುಗ್ಗರಿ, ಮಳಗಿ, ವಗ್ಗಿ, ಕಂಬಿ, ಸಿ.ಆರ್ ಗಡಾದ, ಸುಶೀಲಾ ಅಂದಾನೆಪ್ಪ ವಿಭೂತಿ ಮುಂತಾದವರು ಪಾಲ್ಗೊಂಡಿದ್ದರು.

# ನೀರುಪಾಲಾದ ಬಾಲಕರ ಕುಟುಂಬಗಳಿಗೆ ಎರಡು ಲಕ್ಷ ರೂ. ಪರಿಹಾರ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗನ ರಹಮತ್ ನಗರದ ಬಳಿಯ ರೈಲ್ವೆ ಹಳಿಯ ಪಕ್ಕದಲ್ಲಿ ಇರುವ ಹೊಂಡದಲ್ಲಿ ಜಾನುವಾರು ಮೇಯಿಸಲು ಹೋಗಿದ್ದ ಇಬ್ಬರು ಬಾಲಕರು ನೀರು ಪಾಲಾದ ಘಟನೆ ಮಂಗಳವಾರದಂದು ನಡೆದಿತ್ತು.

ರಹಮತ್ ನಗರದ 12 ವರ್ಷದ ಮಹಮ್ಮದ್ ಅಮನ್ ಹಾಗೂ 14 ವರ್ಷದ ಸಂತೋಷ ಕುಂಬಾರ ಎಂಬ ಬಾಲಕರಿಬ್ಬರು ಸಾವನ್ನಪ್ಪಿದ್ದಾರೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ವಿನಂತಿಯ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳು ಬಾಲಕರ ಕುಟುಂಬಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ.ಗಳ ಪರಿಹಾರ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಮಂಗಳವಾರದಂದು ಮೃತ ಬಾಲಕರ ಮನೆಗಳಿಗೆ ತೆರಳಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ್ದರು.

# ಭಾರತ ಮಾತೆಯ ಕೀರ್ತಿಯನ್ನು ಹೆಚ್ಚಿಸೋಣ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಶ್ರೀಮತಿ ಪಾರ್ವತೆವ್ವ ಕೊಂ ಹಿರೇಬಸಪ್ಪ ಹಳೆಮನೆ ಸರ್ಕಾರಿ ಪ್ರೌಢಶಾಲೆ ಎಕಲಸಪುರದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಭೂದಾನಿಗಳಾದ ಮಲ್ಲನಗೌಡ ದೇವೇಂದ್ರಗೌಡ ಹಳೆಮನೆಯವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಈ ಸುಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಎಲ್ಲ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸೋಣ ಎಂದರು.

ಶಾಲೆಯ ಪ್ರಧಾನ ಗುರುಗಳಾದ ಎಂ.ಡಿ ಮಾದರ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತದಲ್ಲಿ ನಮ್ಮ ಇಚ್ಛೆಯಂತೆ ಬದುಕು ಕಟ್ಟಿಕೊಳ್ಳುವ ಎಲ್ಲಾ ಸ್ವಾತಂತ್ರ್ಯವಿದೆ. ಭಾರತದ ಸಂವಿಧಾನವನ್ನು ಗೌರವಿಸಿ, ಭಾರತ ಮಾತೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸುವಂತೆ ಬದುಕುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ ಎಂದರು. ಮಾಜಿ ಸಚಿವ ಎಸ್.ಎಸ್ ಪಾಟೀಲರ 89ನೇ ಜನ್ಮ ದಿನಾಚರಣೆಯ ನಿಮಿತ್ತ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಲಾಯಿತು. ಸಾಧಕ ವಿದ್ಯಾರ್ಥಿನಿ ಪೂಜಾ ಕತ್ತಿ ಇವಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಶಾಲಾ ಶಿಕ್ಷಕರಾದ ಮಂಜು, ಅನ್ನದಾನೇಶ, ಶಿಕ್ಷಣ ಪ್ರೇಮಿಗಳಾದ ಮಹೇಶಪ್ಪ ಈರಪ್ಪ ಹೊಳೆಯಾಚೆ, ಚಿದಾನಂದ ರೋಣದ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಚನ್ನಪ್ಪ ಈರಪ್ಪ ಹೊಳಿಯಾಚೆ, ಹಿರಿಯ ಶಿಕ್ಷಕರಾದ ದುರ್ಗಾ ಪ್ರಸಾದ ಡಿ, ಎಂ.ಎಚ್ ಸವದತ್ತಿ, ಶೇಖರ ಗೌಡ ಹಳೆಮನೆ ವಕೀಲರು, ಗ್ರಾ ಪಂ ಸದಸ್ಯರಾದ ರವಿ ಚೌಡಕಿ, ಗುರಪ್ಪ ರೋಣದ, ಶರೀಫ್ ಸಾಬ್ ಕನ್ಯಾಳ, ಮುದುಕಪ್ಪ ಹರಿಜನ್, ಈಶ್ವರ್ ಗೌಡ ಹಿರೇಗೌಡ ಮುಂತಾದವರು ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳು ಪ್ರಾರ್ಥಿಸಿದರು. ದುಂಡಪ್ಪ ಕಾಗವಾಡೆ ಸ್ವಾಗತಿಸಿದರು. ರೇಣುಕಾ ಚೌಡಕಿ ಕಾರ್ಯಕ್ರಮ ನಿರೂಪಿಸಿದರು. ಶರಣಪ್ಪ ಮಲಭಾದಿ ವಂದಿಸಿದರು.



# ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶದ ಅವಧಿ ವಿಸ್ತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

2023–24ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪಾಲಿಟೆಕ್ನಿಕ್ , ನರಸಾಪೂರ, ಬೆಟಗೇರಿ ಗದಗ ಸಂಸ್ಥೆಯಲ್ಲಿ ಎಸ್.ಎಸ್.ಎಲ್.ಸಿ ಹಾಗೂ ತತ್ಸಮಾನ ಪರೀಕ್ಷೆಯಲ್ಲಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಖಾಲಿ ಇರುವ ಡಿಪ್ಲೋಮಾ ಕೋರ್ಸ್ ಸೀಟುಗಳಿಗೆ ಪ್ರಾಂಶುಪಾಲರ ಹಂತದಲ್ಲಿ ಆಫ್ ಲೈನ್ ಮೂಲಕ ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಡಿಪ್ಲೋಮಾ ಪ್ರವೇಶ ಪಡೆಯಲು ಕೊನೆಯ ದಿನವನ್ನು ಆಗಸ್ಟ್ 19 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾಲೇಜಿನ ಕಚೇರಿ ಅವದಿಯಲ್ಲಿ ಪಡೆಯಬಹುದಾಗಿದೆ ಎಂದು ಗದಗ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಸರಿಗಮಪ ರಾಗ ರಂಜನಿ' ಗ್ರ್ಯಾಂಡ್ ಫಿನಾಲೆ ಸಂಗೀತ ಕಾರ್ಯಕ್ರಮದಲ್ಲಿ ಶ್ರೀ ಕಲ್ಲಯ್ಯಜ್ಜನವರು

# ದೇವರನ್ನು ಕಾಣಲು ಇರುವ ಸುಲಭ ಮಾರ್ಗವೇ ಸಂಗೀತ



> ಸಂಗೀತವು ದೇವರನ್ನು ಕಾಣಲು ಇರುವ ಏಕೈಕ ಸುಲಭ ಮಾರ್ಗವಾಗಿದೆ. ಸಂಗೀತ ಮತ್ತು ನಾಟಕ ಕ್ಷೇತ್ರಕ್ಕೆ ಲಕ್ಷ್ಮೇಶ್ವರದ ಕೊಡುಗೆ ಅಪಾರವಾಗಿದೆ. ಸಂಗೀತ ಸೇವೆಗಾಗಿಯೇ ಜೀವನ ಮುಡಿಪಾಗಿಟ್ಟ ಕಲಾವಿದರು ಮತ್ತು ಪೋಷಕರನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ಎಲೆ ಮರೆಯ ಕಾಯಿಯಂತೆ ಗ್ರಾಮೀಣ ಭಾಗದ ಪುಟಾಣಿ ಪತ್ರಿಭೆಗಳನ್ನು ಗುರುತಿಸಿ ವೇದಿಕೆ ಕಲ್ಪಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ.
>
> **– ಶ್ರೀ ಕಲ್ಲಯ್ಯಜ್ಜನವರು.**
> ವೀರೇಶ್ವರ ಪುಣ್ಯಾಶ್ರಮ, ಗದಗ.

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಂಗೀತಕ್ಕೆ ಎಲ್ಲ ಮನೋರೋಗಗಳನ್ನು ಗುಣಪಡಿಸುವ, ದ್ವೇಷ, ಅಸೂಯೆ, ನೋವುಗಳನ್ನು ಮರೆಸುವ ಶಕ್ತಿಯಿದೆ. ಯಾವುದೇ ಜಾತಿ–ಕುಲದ ಹಂಗಿಲ್ಲದ ಸಂಗೀತ ಕ್ಷೇತ್ರವನ್ನು ಮತ್ತು ಸಂಗೀತಾಸಕ್ತ ಗ್ರಾಮೀಣ ಪ್ರತಿಭೆಗಳನ್ನು ಪ್ರೋತ್ಸಾಹಿಸಿ ಪೋಷಿಸುವ ಮನೋಗುಣ ನಮ್ಮೆಲ್ಲರದ್ದಾಗಬೇಕು. ಸರಕಾರದ ಪ್ರೋತ್ಸಾಹ ಇನ್ನಷ್ಟು ಅವಶ್ಯವಾಗಿದೆ ಎಂದು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಶ್ರೀ ಕಲ್ಲಯ್ಯಜ್ಜನವರು ಹೇಳಿದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಂಗಳವಾರ ಸಂಜೆ ಪಟ್ಟಣದ ಚನ್ನಮ್ಮನನ ವನದಲ್ಲಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸ್ಮರಣಾರ್ಥ ಶಾರಾದಾ ಸ್ವರಾಂಜಲಿ ಸಂಗೀತ ಪಾಠಶಾಲೆ, ಸ್ಟಾರ್ ಆಫ್ ಲಕ್ಷ್ಮೇಶ್ವರ ಹಾಗೂ ವಿವಿಧ ಸಂಘಟನೆಗಳ ಸಹಕಾರದಲ್ಲಿ ಹಮ್ಮಿಕೊಂಡಿದ್ದ 'ಸರಿಗಮಪ ರಾಗ ರಂಜನಿ' ಗ್ರ್ಯಾಂಡ್ ಫಿನಾಲೆ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಶಾಸಕರಾದ ಜಿ.ಎಸ್ ಗಡ್ಡದೇವರಮಠ, ಜಿ.ಎಂ ಮಹಾಂತಶೆಟ್ಟರ ಮಾತನಾಡಿ, ಸಂಗೀತ ದೇವರ ಕೊಡುಗೆಯಾಗಿದ್ದು, ಸಂಗೀತಕ್ಕೆ ಎಲ್ಲವನ್ನೂ ಗೆಲ್ಲಬಲ್ಲ ಶಕ್ತಿಯಿದೆ. ಆದರೆ ಇಂದು ಟಿವಿ, ಕಂಪ್ಯೂಟರ್, ಮೊಬೈಲ್ ಹಾವಳಿಯಿಂದ ಸಂಗೀತ ಕ್ಷೇತ್ರವು ಕೂಡಾ ಸೊರಗಿದಂತೆ ಕಂಡು ಬರುತ್ತಿರುವುದು ನೋವಿನ ಸಂಗತಿ. ಮಕ್ಕಳಿಗೆ ಸಂಗೀತ ಕಲೆ ರೂಢಿಸುವ ಕಾರ್ಯವಾಗಬೇಕು. ಗ್ರಾಮೀಣ ಭಾಗದ ಸಂಗೀತ ಕಲಾವಿದರ ಬದುಕು ದುರ್ಬರವಾಗುತ್ತಿರುವುದು ದುಃಖದ ಸಂಗತಿ. ಈ ನಿಟ್ಟಿನಲ್ಲಿ ನಮ್ಮ ಸಂಸ್ಕೃತಿ–ಪರಂಪರೆ ಉಳಿಸಿ–ಬೆಳೆಸುವ ಸಂಪ್ರದಾಯ ನೆಲೆನಿಲ್ಲಬೇಕಾಗಿದೆ. ಸಂಗೀತ ಸೇವೆ ಮಾಡುವ ಕಲಾವಿದರು, ಸಂಗೀತ ಪಾಠಶಾಲೆ, ಸಂಘಟನೆ, ವೇದಿಕೆಗಳನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು ಎಂದರು.

ವೇದಿಕೆಯಲ್ಲಿ ಪಟ್ಟಣದ ಮಾಜಿ ಸೈನಿಕರು, ಹಿರಿಯ ರೈತ ಚೇತನರನ್ನು ಸನ್ಮಾನಿಸಲಾಯಿತು. ಸಂಗೀತ ಗುರು ಲಕ್ಷ್ಮಣ ತಳವಾರ, ಸರೋಜಕ್ಕ ಬನ್ನೂರ, ಚಂಬಣ್ಣ ಬಾಳಿಕಾಯಿ, ನಿಂಗಪ್ಪ ಬನ್ನಿ, ಸುಲೇಮಾನಸಾಬ ಕಣಿಕೆ, ಜಯಕ್ಕ ಕಳ್ಳಿ, ಎಂ.ಆರ್ ಪಾಟೀಲ, ಮಹೇಶ ಹೊಗೆಸೊಪ್ಪಿನ, ಬಸವರಾಜ ಬಾಳೇಶ್ವರಮಠ, ಭೀಮಣ್ಣ ಯಂಗಾಡಿ, ಪರಶುರಾಮ ಮುಳ್ಳೊಳ್ಳಿ, ಗಾಯತ್ರಿ ಕುಲಕರ್ಣಿ, ಶಂಕರ ಬ್ಯಾಡಗಿ, ಮಹೇಶ ಹೊಗೆಸೊಪ್ಪಿನ ಮುಂತಾದವರಿದ್ದರು. ಸಂಗೀತ ಕಾರ್ಯಕ್ರಮವನ್ನು ಸಂಘಟಕ ಸೈಯ್ಯದ್ ಮೆಹಬೂಬ್‌ಹುಸೇನ್, ಶೈಲಾ ಆದಿ, ರೇಖಾ ವಡಕಣ್ಣವರ, ಸ್ನೇಹಾ ಹೊಟ್ಟಿ, ಪಾರ್ವತಿ ಕಳ್ಳಿಮಠ ನಿರ್ವಹಿಸಿದರು. ಸರಿಗಮಪ ಗ್ರ್ಯಾಂಡ್ ಫಿನಾಲೆಯಲ್ಲಿ ಲಕ್ಷ್ಮೇಶ್ವರದ ಕು. ಪಂಚಮಿ ಅಂಬಿಗೇರ (ಪ್ರಥಮ), ಶ್ರೀಲಕ್ಷ್ಮೀ ಪಾಟೀಲ(ದ್ವಿತೀಯ) ಮಹೇಶ ಹೂಗಾರ (ತೃತೀಯ) ಸ್ಥಾನದೊಂದಿಗೆ ನಗದು, ಪ್ರಶಸ್ತಿ ಪತ್ರ ಪಡೆದರು.


ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)

**ಕಾರ್ಯನಿರ್ವಾಹಕ ಇಂಜಿನೀಯರ,**
**ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಗದಗ.**

ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.3/ಟೆಂಡರ/2023–24/716

ದಿನಾಂಕ : **16–8–2023**

**ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ**

**Standard Bid Document KW-1** [ಏಕಲಕೋಟಿ ಪದ್ದತಿ]

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW-1ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 03 ಕಾಮಗಾರಿಯ ಟೆಂಡರನ್ನು ಆಹಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2023–24 ZP 2225-00-103-0-40 BCM & ANIMAL HUSBANDARY DEPT HEAD ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, **(https://kppp.karnataka.gov.in)** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent No: RDPR/2023-24/WORK_INDENT : 211, 212, 213

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.**6.00** ಲಕ್ಷ ಮತ್ತು ಗರಿಷ್ಠ ಮೊತ್ತ ರೂ. **20.00** ಲಕ್ಷಗಳು.

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:– ಅರ್ಜಿ ಬೆಲೆ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿರುವಂತೆ ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **17–08–2023** ರಿಂದ **31–08–2023** ರಂದು 16.00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ : **02–09–2023** ರಂದು 16.30 ಗಂಟೆಗೆ ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ **20** ದಿನಗಳ ಒಳಗಾಗಿ **(ಷರತ್ತು ಕ್ರ.ಸಂ : 13 ರಂತೆ)** ಭರಣಾ ಮಾಡಬೇಕು. ಇ–ಪದ್ದತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

**ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,**
**ಪಂ.ರಾಜ್. ಇಂಜಿನೀಯರಿಂಗ್ ವಿಭಾಗ, ಗದಗ**

ವಾಸಾಸಂಇ/ಗದಗ/ಕೆಎಸ್ಎಂಸಿಎ/124/2023–24

# ಬಣಗಾರ ಸಮಾಜದ ವತಿಯಿಂದ ಪ್ರತಿಭಾ ಪುರಸ್ಕಾರ

**■ವಿಜಯಸಾಕ್ಷಿ ಸುದ್ದಿ, ಗದಗ**

ಬಣಗಾರ ಸಮಾಜದ ಕುಲಗುರು ಶ್ರೀ ಶಂಕರ ದಾಸಿಮಯ್ಯನವರ ಜಯಂತ್ಯುತ್ಸವದ ನಿಮಿತ್ತ ಬಸವೇಶ್ವರ ನಗರದ ಶ್ರೀ ಶಂಕರಲಿಂದ ದೇವಸ್ಥಾನ ಟ್ರಸ್ಟ್ ಕಮಿಟಿ ಮತ್ತು ಬಣಗಾರ ಸಮಾಜ ಸೇವಾ ಸಂಘದ ಆಶ್ರಯದಲ್ಲಿ ಆಗಸ್ಟ್ 27ರ ಸಂಜೆ 6 ಗಂಟೆಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ, ಸಹಸ್ರ ಚಂದ್ರದರ್ಶನ ಪೂರೈಸಿದ ಸಮಾಜದ 75 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಸನ್ಮಾನ ಕಾರ್ಯಕ್ರವನ್ನು ಮತ್ತು ಆಗಸ್ಟ್ 28ರ ಬೆಳಿಗ್ಗೆ ಶ್ರೀ ಶಂಕರ ದಾಸಿಮಯ್ಯನವರ ಜಯಂತ್ಯುತ್ಸವ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪ್ರತಿಭಾ ಪುರಸ್ಕಾರ ಮತ್ತು ನೋಟ್‌ಬುಕ್ ಪಡೆಯಲು ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಶ್ರೀ ಶಂಕರಲಿಂಗ ದೇವಸ್ಥಾನ ಕಾರ್ಯಾಲಯದಲ್ಲಿ ಆ.25ರ ಸಂಜೆ 5.30ರ ಒಳಗೆ ನೋಂದಾಯಿಸಿಕೊಳ್ಳಲು ಹಾಗೂ ಈ ಕಾರ್ಯಕ್ರಮಕ್ಕೆ ಸಮಾಜ ಬಾಂಧವರು ತನು-ಮನ-ಧನದಿಂದ ಸಹಕರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಬಣಗಾರ ಸಮಾಜ ಸೇವಾ ಸಂಘದ ಅಧ್ಯಕ್ಷ ವೀರೇಶ ಮುನವಳ್ಳಿಯವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಸರ್ವಶಕ್ತಿ ವಿವಿಧೋದ್ದೇಶಗಳ ಟ್ರಸ್ಟ್‌ನಿಂದ ಸ್ವಾತಂತ್ರ್ಯೋತ್ಸವ



**■ವಿಜಯಸಾಕ್ಷಿ ಸುದ್ದಿ, ಗದಗ**

ಬೆಟಗೇರಿಯ ವಾರ್ಡ್ ನಂ.4ರ ಮಂಜುನಾಥ ನಗರದಲ್ಲಿ ಸರ್ವಶಕ್ತಿ ವಿವಿಧೋದ್ದೇಶಗಳ ಸೇವಾ ಟ್ರಸ್ಟ್ ವತಿಯಿಂದ 77ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು.

ಧ್ವಜಾರೋಹಣವನ್ನು ಸಂಘದ ಯುವ ಮುಖಂಡ ಮಂಜುನಾಥ ಹಣಗಿ ನೆರವೇರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಪ್ರಶಾಂತ್ ಬೆಟಗೇರಿ, ರಾಮಸಿಂಗ್ ಜಮಾದಾರ, ಪ್ರತೀಕ ಮೇಳೆನವರ, ತಿಪ್ಪಣ್ಣ ಬಾಬಣಿ, ಮಂಜುನಾಥ ಭಜಂತ್ರಿ, ಮಂಜುನಾಥ ಮೇಳೆನವರ, ಚಿದಂಬರ ಹುಣಿಸೆಮರದ, ಲಕ್ಷ್ಮಣ ಭಜಂತ್ರಿ, ಆರ್.ಎಲ್ ಮೇಳೆನವರ, ಮಹೇಪೂಜ ದಂಡಿನ, ರಮೇಶ್ ತಾಡೂರ, ಪರಶುರಾಮ ಕೆಂಚರ್ಲಿ, ಮಹಿಳಾ ಮುಖಂಡರಾದ ಈರಮ್ಮ ಕೆಂಚೆ, ಅಕ್ಕಮ್ಮ ಆಲೂರ, ಸುನಂದಾಬಾಯಿ ರಜಪೂತ, ಅಂಗನವಾಡಿ ಶಿಕ್ಷಕಿ ಶ್ರೀಮತಿ ಕಮ್ಮಾರ ಮುಂತಾದವರು ಉಪಸ್ಥಿತರಿದ್ದರು.

## ಸರಕಾರದ ಜನಪರ ಯೋಜನೆಗಳಿಂದ ಸಾಮಾಜಿಕ ಬದಲಾವಣೆ ಸಾಧ್ಯ: ಸಚಿವ ಸಂತೋಷ ಲಾಡ್

# ಬಡವರ ಉತ್ತಮ ಬದುಕಿಗೆ ಆದ್ಯತೆ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ರಾಜ್ಯ ಸರಕಾರವು ಬಡವರ ಉತ್ತಮ ಬದುಕಿಗೆ ಆದ್ಯತೆ ನೀಡಿದ್ದು, ಜನಪರ ಯೋಜನೆಗಳ ಮೂಲಕ ಸಾಮಾಜಿಕ ಬದಲಾವಣೆ ತರಲು ಪ್ರಯತ್ನಿಸುತ್ತಿದೆ. ಶಕ್ತಿ ಯೋಜನೆ, ಅನ್ನ ಭಾಗ್ಯ, ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ, ಯುವನಿಧಿ ಅಂತಹ ನೂತನ ಯೋಜನೆಗಳನ್ನು ಜಾರಿಗೊಳಿಸುತ್ತಿದೆ ಎಂದು ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಬುಧವಾರ ಮಧ್ಯಾಹ್ನ ಸೃಜನಾ ರಂಗಮಂದಿರದಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಆಯೋಜಿಸಿದ್ದ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಗೃಹಜ್ಯೋತಿಗೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯಸರ್ಕಾರವು ಚುನಾವಣಾ ಪೂರ್ವ ನೀಡಿದ್ದ ಭರವಸೆಗಳನ್ನು ಈಡೇರಿಸಲು ಮೊದಲ ಆದ್ಯತೆ ನೀಡಿದೆ. ಸುಮಾರು 60 ಸಾವಿರ ಕೋಟಿ ರೂ. ವೆಚ್ಚದಲ್ಲಿ ಪಂಚ ಯೋಜನೆಗಳನ್ನು ಅನುಷ್ಠಾನ ಗೊಳಿಸುತ್ತಿದೆ. ಬಡವರ ಪರ ಅಗತ್ಯವಿರುವ ಎಲ್ಲಾ ರೀತಿಯ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಬದ್ಧತೆ ಇದೆ ಎಂದು ಅವರು ಹೇಳಿದರು.



ಗೃಹಜ್ಯೋತಿ ಯೋಜನೆಯು ಧಾರವಾಡ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ಗಳಿಸಿದ್ದು, ಉಳಿದ ಗ್ರಾಹಕರು ಸಹ ಗೃಹಜ್ಯೋತಿ ಯೋಜನೆಗೆ ನೊಂದಾಯಿಸಿಕೊಳ್ಳಲು ಹೆಸ್ಕಾಂ ಸೂಕ್ತ ಪ್ರಚಾರ ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡಬೇಕೆಂದು ಅವರು ತಿಳಿಸಿದರು. ಜಿಲ್ಲೆಯಲ್ಲಿ ಗೃಹಲಕ್ಷ್ಮಿ ಹಾಗೂ ಯುವನಿಧಿ ಯೋಜನೆಗಳನ್ನು ಜಾರಿಗೊಳಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಶಾಸಕ ಎನ್.ಎಚ್. ಕೋನರಡ್ಡಿ ಅವರು ಮಾತನಾಡಿ, ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಯನ್ನು ರಾಜ್ಯ ಸರಕಾರ ಈಡೇರಿಸಿದೆ. ರೈತರಿಗೆ ಮತ್ತು ಗ್ರಾಹಕರಿಗೆ ತೊಂದರೆ ಆಗದಂತೆ ವಿದ್ಯುತ್ ಪೂರೈಕೆ ಮಾಡಬೇಕು ಮತ್ತು ಗೃಹಜ್ಯೋತಿ ಯೋಜನೆ ಯಶಸ್ವಿಗೊಳಿಸಬೇಕು ಎಂದು ಹೇಳಿದರು. ಹೆಸ್ಕಾಂ ಅಧಿಕಾರಿ ಮತ್ತು ಸಿಬ್ಬಂದಿಗಳು ಇನ್ನಷ್ಟು ಕ್ರಿಯಾಶೀಲವಾಗಿ, ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದರು.

ಕಿರುನಾಟಕ ಪ್ರದರ್ಶನ: ಕಾರ್ಯಕ್ರಮ ವೇದಿಕೆಯಲ್ಲಿ ರಾಜ್ಯ ಸರಕಾರದ ಗೃಹ ಜ್ಯೋತಿ ಯೋಜನೆಯ ಜನ ಜಾಗೃತಿಗಾಗಿ ಹೆಸ್ಕಾಂ ನೌಕರರ ತಂಡದವರು ಝೀರೊ ಬಿಲ್ ಕಿರುನಾಟಕ ಪ್ರದರ್ಶಿಸಿ, ಯೋಜನೆಯ ಪ್ರಯೋಜನೆ ಪಡೆಯುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

> ಯುವಕರು ವಿಶೇಷವಾಗಿ ರಾಜಕೀಯಕ್ಕೆ ಬರಬೇಕು. ಯುವಕರಿಂದ ಸಾಮಾಜಿಕ, ಆರ್ಥಿಕ ಬದಲಾವಣೆ ಸಾಧ್ಯ. ಉತ್ತಮ ನಾಯಕತ್ವ ಬೆಳೆಸಲು ರಾಜಕೀಯ ಅವಕಾಶ ನೀಡುತ್ತದೆ. ಯುವ ಸಮುದಾಯ ಸೇವಾ ಮನೋಭಾವ ಬೆಳೆಸಿಕೊಳ್ಳಲು ರಾಜಕೀಯ ಸೇರಬೇಕೆಂದು.
>
> **–ಸಂತೋಷ ಲಾಡ್**, ಕಾರ್ಮಿಕ ಸಚಿವರು.

ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಮ್ಮದ ರೋಷನ್ ಪ್ರಾಸ್ತಾವಿಕವಾಗಿ ಮಾತನಾಡಿ, ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ಗೃಹಜ್ಯೋತಿ ಯೋಜನೆಗೆ ಉತ್ತಮ ಸ್ಪಂದನೆ ಸೀಗುತ್ತಿದೆ. ಹೆಸ್ಕಾಂ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ಈಗಾಗಲೇ ಶೇ.90 ರಷ್ಟು ಮತ್ತು ಧಾರವಾಡ ಜಿಲ್ಲೆಯಲ್ಲಿ ಶೇ.80 ರಷ್ಟು ಗ್ರಾಹಕರು ಯೋಜನೆಗೆ ನೋಂದಾಯಿಸಿಕೊಂಡಿದ್ದಾರೆ. ಧಾರವಾಡ ಜಿಲ್ಲೆಯ ಸುಮಾರು 5.4 ಲಕ್ಷ ಆರ್.ಆರ್ ನಂಬರಗಳ ಪೈಕಿ 4.2 ಲಕ್ಷ ಗ್ರಾಹಕರು ಆಗಸ್ಟ್ ತಿಂಗಳಲ್ಲಿ ಗೃಹಜ್ಯೋತಿ ಯೋಜನೆಯ ಲಾಭ ಪಡೆಯುತ್ತಿದ್ದಾರೆ ಎಂದು ಅವರು ತಿಳಿಸಿದರು. ವಿವಿಧ ಗ್ರಾಹಕರಿಗೆ ಹೆಸ್ಕಾಂದಿಂದ ಝೀರೋ ಮೊತ್ತದ ಬಿಲ್ಲುಗಳನ್ನು ಸಾಂಕೇತಿಕವಾಗಿ ವಿತರಿಸಲಾಯಿತು. ಹೆಸ್ಕಾಂ ಗ್ರಾಹಕರ ಪರವಾಗಿ ಎಚ್.ಆರ್. ಕಮಡೊಳ್ಳಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಹೆಸ್ಕಾಂ ತಾಂತ್ರಿಕ ವಿಭಾಗದ ನಿರ್ದೇಶಕ ಶ್ರೀಕಾಂತ ಸಸಾಲಟ್ಟಿ ಸ್ವಾಗತಿಸಿದರು. ಆಕಾಶವಾಣಿ ಹಿರಿಯ ಉದ್ಘೋಷಕಿ ಮಾಯಾ ರಾಮನ್ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಪಾಲಕ ಅಭಿಯಂತರ ಎಸ್. ಜಗದೀಶ ಅವರು ವಂದಿಸಿದರು.

ವೇದಿಕೆಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಹೆಸ್ಕಾಂನ ಹಣಕಾಸು ವಿಭಾಗದ ನಿರ್ದೇಶಕ ಪ್ರಕಾಶ ಪಾಟೀಲ, ಜಾಗೃತ ದಳದ ಪೊಲೀಸ್ ಅಧೀಕ್ಷಕ ಶಿರಕೋಳ ನಾಯಕ, ಮುಖ್ಯ ಅಭಿಯಂತರ ರಮೇಶ ಎಲ್ ಬೆಂಡಿಗೇರಿ ಸೇರಿದಂತೆ ವಿವಿಧ ಜನಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

# ಎಂಜಿಎಂ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಎಂಜಿಎಂ ಪೂರ್ವ ಪ್ರಾಥಮಿಕ ಶಾಲೆಯಲ್ಲಿ 77ನೇ ಸ್ವಾತಂತ್ರ್ಯೋತ್ಸದ ಅಂಗವಾಗಿ ಧ್ವಜಾರೋಹಣವನ್ನು ಸಂಸ್ಥಾಪಕರಾದ ವಿದ್ಯಾ ಮಹಾಂತ ಶೆಟ್ಟರ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಅನೇಕ ಮಹನೀಯರ ತ್ಯಾಗ, ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿದೆ. ಮಕ್ಕಳಲ್ಲಿ ದೇಶಭಕ್ತಿ, ಗುರುಹಿರಿಯರನ್ನು ಗೌರವಿಸುವ ಸಂಸ್ಕೃತಿಯನ್ನು ಬೆಳೆಸಬೇಕು.

ಇಂದಿನ ಮಕ್ಕಳೇ ನಾಡಿನ ಪ್ರಜ್ಞಾವಂತ ಪ್ರಜೆಗಳಾಗುವುದರಿಂದ ಅವರಿಗೆ ದೇಶದ ಸಮಗ್ರತೆ, ಏಕತೆ, ಭ್ರಾತೃತ್ವ ಭಾವದ ಪರಿಕಲ್ಪನೆ ಮೂಡಿಸಿ, ಸತ್ಪ್ರಜೆಗಳನ್ನಾಗಿಸುವ ಮಹತ್ತರ ಜವಾಬ್ದಾರಿ ಶಿಕ್ಷಕ ಮತ್ತು ಪಾಲಕರದ್ದಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯೆ ದೀಪಾಲಿ ಪಾಟೀಲ, ಶ್ರೀದೇವಿ ಪಾಟೀಲ, ಪುಷ್ಪ, ಮಮತಾ, ರೇಣುಕಾ, ಮಂಜುಳಾ ಕೊಟಿನ, ಭುವನೇಶ್ವರಿ, ಮಂಜುಳಾ ಬಳ್ಳಾರಿ, ಪಾಲಕರು, ಶಾಲಾ ಸಿಬ್ಬಂದಿ ವರ್ಗದವರು, ಮಕ್ಕಳು ಇದ್ದರು. ಮುಖ್ಯ ಅತಿಥಿಗಳಾಗಿ ಪತ್ರಕರ್ತ ಮಂಜು ಲಮಾಣಿ ಪಾಲ್ಗೊಂಡರು.

# ಕಲ್ಲು ಗಣಿಗಾರಿಕೆಯ ಪರಿಶೀಲನೆ ನಡೆಸಿದ ಅಧಿಕಾರಿಗಳ ತಂಡ

**■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ಗುತ್ತಿಗೆ ಪ್ರದೇಶದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯ ಬ್ಲಾಸ್ಟಿಂಗ್‌ನಿಂದ ಸುತ್ತಮುತ್ತಲಿನ ಮನೆ, ಕೊಳವೆ ಬಾವಿ, ದೇವಸ್ಥಾನಗಳ ಕಟ್ಟಡಕ್ಕೆ ಹಾನಿಯಾಗುತ್ತಿದೆ ಎಂದು ಗ್ರಾಮಸ್ಥರು ದೂರು ನೀಡಿದ ಹಿನ್ನೆಲೆಯಲ್ಲಿ, ಬುಧವಾರ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದರು.

ಹರಪನಹಳ್ಳಿ ಕಸಬಾ ಹೋಬಳಿ ವ್ಯಾಪ್ತಿಯ ಮಾದಾಪುರ ಗ್ರಾಮದ ಸರ್ವೆ ನಂ.429/1 ಹಾಗೂ 429/ಬಿ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಗುತ್ತಿಗೆ ಪಡೆದಿರುವ ಸಲಿಂಬಾಷ ಹಾಗೂ ದಾದಾಖಲಂದರ್ ಅವರು 70–80 ಅಡಿ ಆಳದವರೆಗೆ ಬ್ಲಾಸ್ಟಿಂಗ್ ಮಾಡುತ್ತಿದ್ದಾರೆ. ಇದರಿಂದ ಸುತ್ತಲಿನ 10–12 ಕಿ.ಮೀ.ವರೆಗಿನ ಭೂ ಪ್ರದೇಶಗಳಲ್ಲಿ ಕಂಪನವಾಗುತ್ತಿದ್ದು, ಜನ, ಜಾನುವಾರು, ಪ್ರಾಣಿ–ಪಕ್ಷಿಗಳಿಗೂ ತೊಂದರೆಯಾಗುತ್ತಿದೆ.



ಬಾಗಳಿ ಗ್ರಾಮದ ಸುಪ್ರಸಿದ್ಧ ಕಲ್ಲೇಶ್ವರ ದೇವಸ್ಥಾನ, ಕೂಲಹಳ್ಳಿಯ ಮದ್ದಾನೇಶ್ವರ ದೇವಸ್ಥಾನಗಳಿಗೂ ಹಾನಿಯಾಗುತ್ತಿದೆ ಎಂದು ಕೆ.ಎಂ ಬಸವರಾಜಯ್ಯ ಸೇರಿದಂತೆ ಬಾಗಳಿ, ದಡಿಗಾರನಹಳ್ಳಿ, ಕಾಯಕದಹಳ್ಳಿ, ಶೃಂಗಾರತೋಟದ ಗ್ರಾಮಸ್ಥರು ಗಣಿ ಮತ್ತು ಭೂವಿಜ್ಞಾನ ಉಪನಿರ್ದೇಶಕರಿಗೆ ದೂರು ಸಲ್ಲಿಸಿದ್ದರು.

ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಧರಣೇಶ್, ಮಂಜುನಾಥ ಹಾಗೂ ಬಳ್ಳಾರಿ ಡಿಜಿಎಂಎಸ್, ಕಂದಾಯ ಇಲಾಖೆ ಹಾಗೂ ಸಿಪಿಐ ನಾಗರಾಜ ಕಮ್ಮಾರ ಅವರ ನೇತೃತ್ವದಲ್ಲಿ ಸ್ಥಳ ಪರಿಶೀಲನೆ ಮಾಡಿ ಮಹಜರು ನಡೆಸಿದರು. ಭೂಮಿಯ ಕಂಪನವನ್ನು ಮಾಪನ ಮಾಡಬೇಕಾಗಿದ್ದು, ಅಲ್ಲಿಯವರೆಗೆ ಸ್ಥಳದಲ್ಲಿ ಯಾವುದೇ ಬ್ಲಾಸ್ಟಿಂಗ್ ಕಾರ್ಯ ಮಾಡದಂತೆ ಗುತ್ತಿಗೆದಾರರಿಗೆ ಸೂಚಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ ಅಶೋಕ, ಮುಖಂಡರಾದ ಕೆ.ಎಂ ಬಸವರಾಜಯ್ಯ, ಮಂಜುನಾಥ ಬಾಗಳಿ, ಕೆ.ಎಂ ಸಚಿನ್ ಗಿರೀಶ್ ಎಸ್.ಎಂ, ಮಲ್ಲೇಶ್ ಬಿ., ಪ್ರಸನ್ನ ಪಿ., ಗುರುಬಸವರಾಜ, ವೆಂಕಟೇಶ್, ಕೋಟೆಪ್ಪ, ರಾಜ ಮುಂತಾದವರು ಹಾಜರಿದ್ದರು.

# 'ಶರಣರ ಚರಿತಾಮೃತ' ಪ್ರಾರಂಭೋತ್ಸವ ಇಂದು

**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಪಟ್ಟಣದ ಬಾಲಲೀಲಾ ಮಾಹಾಂತ ಶಿವಯೋಗಿಗಳ ಗವಿಮಠದಲ್ಲಿ 'ಶರಣರ ಚರಿತಾಮೃತ' ಪುರಾಣ ಪ್ರವಚನ ಕಾರ್ಯಕ್ರಮವು ಗುರುವಾರ ಸಾಯಂಕಾಲ 7.30ಕ್ಕೆ ಪ್ರಾರಂಭಗೊಳ್ಳಲಿದೆ.

ಪ್ರಾರಂಭೋತ್ಸವದ ಸಾನ್ನಿಧ್ಯವನ್ನು ಗವಿಮಠದ ಡಾ.ಮಲ್ಲಿಕಾರ್ಜುನ ಮಾಹಾಸ್ವಾಮಿಗಳು ವಹಿಸಿಕೊಳ್ಳುವರು. ಅಧ್ಯಕ್ಷತೆಯನ್ನು ಎಂ.ಡಿ ಬಟ್ಟೂರ, ಎಸ್.ಎಂ ನೀಲಗುಂದ ವಹಿಸಲಿದ್ದು, ಪ್ರವಚನಕಾರರಾಗಿ ವೇ.ಮೂ ಪಿ.ಎಸ್ ಮರಿದೇವರಮಠ, ತಬಲಾ ಸೇವೆ ಮಾಹಾಂತೇಶ ಬಳ್ಳಾರಿ ವಹಿಸಿಕೊಂಡಿದ್ದು, ಜಾತ್ರಾ ಸಮಿತಿಯ ಸರ್ವ ಸದಸ್ಯರು ಭಾಗವಹಿಸುವರು ಎಂದು ಡಾ. ಎಸ್.ಸಿ ಚವಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ, ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಅವರ ಸುಪುತ್ರ, ಎಸ್ ಎಸ್ ಶೆಟ್ಟರ್ ಪೌಂಡೇಶನ್ ಮೂಲಕ ಹಲವಾರು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಎಸ್ ಎಸ್ ಶೆಟ್ಟರ್ ಪೌಂಡೇಶನ್ ಅಧ್ಯಕ್ಷ ಸಂಕಲ್ಪ ಶೆಟ್ಟರ್ ಅವರಿಗೆ ನರಗುಂದ ಕೆಪಿಸಿಸಿ ಸಾಮಾಜಿಕ ಜಾಲತಾಣದ ಸಂಯೋಜಕರಾದ ಪ್ರವೀಣ ಸಂಗಳದಶೆಟ್ಟರ್ ಜನ್ಮದಿನದ ಶುಭಾಶಯ ತಿಳಿಸಿದರು.

# ಸ್ವಾತಂತ್ರ್ಯೋತ್ಸವ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿಯ ತಿಮ್ಮಾಪೂರ ಗ್ರಾಮದಲ್ಲಿ 77ನೇ ಸ್ವಾತಂತ್ರ್ಯೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಜಯಂತಿಯನ್ನು ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಆಚರಿಸಲಾಯಿತು.

ರಾಯಣ್ಣನ ಪುತ್ಥಳಿಯ ಮುಂದೆ ಮಾಜಿ ಸೈನಿಕರಾದ ಬಾಲಪ್ಪ ಲಕ್ಕುಂಡಿ, ಬಾಲಪ್ಪ ಜೋಗಿನ ಧ್ವಜಾರೋಹಣವನ್ನು ನೆರವೇರಿಸಿದರು. ಗ್ರಾಮದ ವಿವಿಧ ಸಂಘ–ಸಂಸ್ಥೆಗಳಾದ ಚೌಕಿ ಬಸವೇಶ್ವರ ಸಂಘ, ಪ್ರಾಥಮಿಕ ಸಹಕಾರಿ ಸಂಘ, ಲಕ್ಷ್ಮೀನಾರಾಯಣ ಸಂಘ, ಬೀರಲಿಂಗೇಶ್ವರ ಸಂಘ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಗ್ರಾ ಪಂ ಕಾರ್ಯಾಲಯ,ಅಂಗನವಾಡಿ ಕೇಂದ್ರ, ಕೆವಿಎಸ್‌ಆರ್ ಕಾಲೇಜು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉದಯ ಪೂರ್ವ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯ ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ, ಕೆವಿಎಸ್‌ಆರ್ ಕಾಲೇಜು ಪ್ರಾಚಾರ್ಯ ಸಿದ್ದು ಯಾಪಲಪರವಿ, ಆರ್.ಪಿ ಕುರುಡಗಿ, ಯಲ್ಲಪ್ಪ ಹಾಗಲದ, ಹುಚ್ಚೀರಪ್ಪ ಜೋಗಿನ, ಬಸವರಾಜ ದೇವರವರ, ಶರಣಪ್ಪ ಜೋಗಿನ, ಯಲ್ಲಪ್ಪ ಜೋಗಿನ, ತಿರುಕಪ್ಪ ಕುಂಬಾರ, ರಾಜು ಚವ್ಹಾಣ, ರಮೇಶ್ ಗಂಗಪುತ್ರ, ಆರ್.ವಿ ಕಮತರ್, ಶಾಂತಕುಮಾರ ಮಲ್ಲಾಪೂರ, ಮಂಜುನಾಥ ಬಸರಿಕಟ್ಟಿ , ಜೆ.ಜೆ ಹಿರೇಹಾಳ, ಸತೀಶ್ ಜೋಗಿನ, ಪರಶುರಾಮಪ್ಪ ಹಳ್ಳಿಕೇರಿ, ಗ್ರಾ ಪಂ ಅಧ್ಯಕ್ಷರಾದ ಹನುಮವ್ವ ತಳವಾರ, ಪಿಡಿಓ ವಿದ್ಯಾ ಕೆ, ಸರ್ವ ಸದಸ್ಯರು, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು, ಗ್ರಾಮದ ಗುರು–ಹಿರಿಯರು ಪಾಲ್ಗೊಂಡಿದ್ದರು.

## ಲಕ್ಕುಂಡಿ: ತಾಲೂಕಿನಾದ್ಯಂತ ಸಡಗರದ ಸ್ವಾತಂತ್ರ್ಯೋತ್ಸವ ಆಚರಣೆ

# ಗಮನಸೆಳೆದ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು

**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ತಾಲೂಕಿನ ವಿವಿಧ ಶಾಲಾ–ಕಾಲೇಜು, ಸಂಘ–ಸಂಸ್ಥೆಗಳಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

**ಬಾಲಕಿಯರ ಸರಕಾರಿ ಪ್ರೌಢಶಾಲೆ:** ಧ್ವಜಾರೋಹಣವನ್ನು ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ಪುರದ ನೆರವೇರಿಸಿದರು. ಕೆನರಾ ಬ್ಯಾಂಕ್ ಅಧಿಕಾರಿಗಳು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ 5 ಸಾವಿರ ರೂ.ಗಳ ಸ್ಕಾಲರ್‌ಶಿಪ್ ಚೆಕ್ ನೀಡಿದರು. ಗ್ರಾ ಪಂ ಅಧ್ಯಕ್ಷ ಕೆ.ಎಸ್ ಪೂಜಾರ, ಸದಸ್ಯರಾದ ಅನಸವ್ವ ಅಂಬಕ್ಕಿ, ಕುಬೇರಪ್ಪ ಬೆಂತೂರ, ಶೋಭಾ ಮಲ್ಲಾಡದ ಮಲ್ಲಪ್ಪ ದಂಡಿನ, ನಾಗಪ್ಪ ಕುಂಬಾರ, ಲಕ್ಷ್ಮವ್ವ ಕೆಂಗೋಡದ, ಮುಖ್ಯೋಪಾಧ್ಯಾಯ ವೈ.ಸಿ ನದಾಫ, ಸಹ ಶಿಕ್ಷಕರು ಹಾಜರಿದ್ದರು.

**ಎಂಕೆಬಿಎಸ್:** ಸರಕಾರಿ ಮಾದರಿಯ ಕನ್ನಡ ಗಂಡುಮಕ್ಕಳ ಶಾಲೆಯ ಧ್ವಜಾರೋಹಣವನ್ನು ಎಸ್‌ಡಿಎಂಸಿ ಅಧ್ಯಕ್ಷೆ ನಾಗಮ್ಮ ಹಾಲಿನವರ ನೆರವೇರಿಸಿದರು. ಗ್ರಾ ಪಂ ಅಧ್ಯಕ್ಷ ಕೆ.ಎಸ್ ಪೂಜಾರ, ಸದಸ್ಯರಾದ ಕುಬೇರಪ್ಪ ಬೆಂತೂರ, ಅನಸವ್ವ ಅಂಬಕ್ಕಿ, ಶಾಲಾ ಉಸ್ತುವಾರಿ ಸಮಿತಿಯ ಉಪಾಧ್ಯಕ್ಷ ಗವಿಸಿದ್ದಪ್ಪ ಯಲಿಶಿರುಂಜ, ರಾಜೇಸಾಬ ಗುಡಗೇರಿ, ಗುರುಶಾಂತಪ್ಪ ಅರಹುಣಶಿ, ಸಿಆರ್‌ಪಿ ಕೆ.ಟಿ ಮೀರಾನಾಯಕ, ಸಮಿತಿಯ ಸದಸ್ಯರು ಹಾಜರಿದ್ದರು.



**ಜನತಾ ವಿದ್ಯಾವರ್ಧಕ ಸಂಸ್ಥೆ:** ದಿ ಜನತಾ ವಿದ್ಯಾವರ್ಧಕ ಸಂಸ್ಥೆಯ ಬಿ.ಎಚ್ ಪಾಟೀಲ ಸಂಯುಕ್ತ ಪದವಿಪೂರ್ವ ಕಾಲೇಜಿನ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ ಆಯ್.ಎನ್ ಕುಂಬಾರ ನೆರವೇರಿಸಿದರು. ಸಂಸ್ಥೆಯ ನಿರ್ದೇಶಕ ಕೆ.ಎಂ ಪಾಟೀಲ, ಪ್ರಕಾಶ ತೋಫಿನ, ಕೆ.ಎನ್ ಅಂಬಕ್ಕಿ, ವೀರಯ್ಯ ಗಂದದ, ಶಾಂತಮ್ಮ ಬೊರಟ್ಟಿ ಇದ್ದರು. ಪ್ರಾಚಾರ್ಯ ಬಿ.ವಿ ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಎ.ಎನ್ ಪೂಜಾರ ಸೇರಿದಂತೆ ಶಿಕ್ಷಕರು ಪಾಲ್ಗೊಂಡಿದ್ದರು.

**ಸರಕಾರಿ ಕಿರಿಯ ಪ್ರಾಥಮಿಕ ಶಾಲೆ:** ಧ್ವಜಾರೋಹಣವನ್ನು ಎಸ್‌ಡಿಎಂಸಿ ಅಧ್ಯಕ್ಷ ಮರಿಯಪ್ಪ ವಡ್ಡರ ನೆರವೇರಿಸಿದರು. ಶಾಲೆಗೆ ದೇಣಿಗೆ ನೀಡಿದ ಸುರೇಶ ಹಳ್ಳಿ, ಎಸ್.ಎಂ ಮೇಟಿ, ಬಸವರಾಜ ಡೋಣಿ, ಶ್ರೀನಿವಾಸ ಅವರನ್ನು ಸನ್ಮಾನಿಸಲಾಯಿತು. ಪ್ರಧಾನ ಗುರುಮಾತೆ ಎಸ್.ಜಿ ಕಂಠಿ, ಎಸ್.ಎಸ್ ಅಂಕದ, ಜೆ.ಆರ್ ಕುಲಕರ್ಣಿ, ಎಸ್.ಬಿ ಪಾಟಿಲ, ಎಸ್.ಕೆ ವನಹಳ್ಳಿ, ಎಸ್.ಕೆ ಬಳಿಗಾರ, ಎಸ್‌ಡಿಎಂಸಿ ಸದಸ್ಯರು ಹಾಜರಿದ್ದರು.

**ಡಿಪಿಇಪಿ ಶಾಲೆ:** ಧ್ವಜಾರೋಹಣವನ್ನು ಎಸ್‌ಡಿಎಂಸಿ ಅಧ್ಯಕ್ಷ ಮಹಾಂತೇಶ ಗುರಿಕಾರ ನೆರವೇರಿಸಿದರು. ಗ್ರಾ ಪಂ ಅಧ್ಯಕ್ಷ ಕೆ.ಎಸ್ ಪೂಜಾರ ವನ ಮಹೋತ್ಸವಕ್ಕೆ ಚಾಲನೆ ನೀಡಿದರು. ಗ್ರಾ ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ, ಸದಸ್ಯರಾದ ಲಕ್ಷ್ಮಣ ಗುಡಸಲಮನಿ, ಶಾಂತವ್ವ ಮಣಕವಾಡ, ಈರಮ್ಮ ಚಬ್ಬರಭಾವಿ, ಮಂಜುನಾಥ ಗುಡಸಲಮನಿ, ಎಸ್‌ಡಿಎಂಸಿ ಉಪಾಧ್ಯಕ್ಷೆ ಮಂಜುಳಾ ಗಡ್ಡಿ, ಸದಸ್ಯರು, ಮುಖ್ಯೋಪಾಧ್ಯಾಯ ಕೆ.ಬಿ ಕೊಣ್ಣೂರು ಹಾಜರಿದ್ದರು. ಕೆನರಾ ಬ್ಯಾಂಕ್ ವತಿಯಿಂದ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಚೆಕ್ ವಿತರಿಸಲಾಯಿತು.

**ಸ್ವಾಮಿ ವಿವೇಕಾನಂದ ಶಾಲೆ:** ಧ್ವಜಾರೋಹಣವನ್ನು ಸ್ಥಾನಿಕ ಕಮಿಟಿ ಸದಸ್ಯ ಆರ್.ವಿ ಅಂಬಕ್ಕಿ ನೆರವೇರಿಸಿದರು. ಪ್ರಧಾನ ಶಿಕ್ಷಕ ಎಂ.ಎಸ್ ಬೆಲೇರಿ, ಸಹ ಶಿಕ್ಷಕರು ಪಾಲ್ಗೊಂಡಿದ್ದರು.

**ಉರ್ದು ಶಾಲೆ:** ಧ್ವಜಾರೋಹಣವನ್ನು ಮುಖ್ಯೋಪಾಧ್ಯಾಯೆ ಅಪ್ರಿನಾ ನರೇಗಲ್ಲ ನೆರವೇರಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಎಂ.ಎಂ ಹುಬ್ಬಳ್ಳಿ, ಉಪಾಧ್ಯಕ್ಷ ತಸ್ಲಿಂ ಯರಗುಡಿ, ನಜೀರ ಕೋಲಾಪೂರ, ಸದಸ್ಯರು ಪಾಲ್ಗೊಂಡಿದ್ದರು.

**ಬಾಪೂಜಿ ಶಾಲೆ:** ಬಾಪೂಜಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಂ.1ರ ಸಂಯುಕ್ತಾಶ್ರಯದಲ್ಲಿ ಧ್ವಜಾರೋಹಣವನ್ನು ಗ್ರಾಮದ ಹಿರಿಯರಾದ ವಿ.ಕೆ ಪಾಟೀಲ ನೆರವೇರಿಸಿದರು. ಶಾಲೆಯ ಹಳೆಯ ವಿದ್ಯಾರ್ಥಿ ಮಾರುತಿ ಕೋಡಿಕೇರಿ ಮಕ್ಕಳಿಗೆ ನೋಟ್‌ಬುಕ್ ದೇಣಿಗೆ ನೀಡಿದರು. ಪಕ್ಕಣ್ಣ ಕಲಬಂಡಿ ಅಧ್ಯಕ್ಷತೆ ವಹಿಸಿದ್ದರು. ಶಿವನಗೌಡ ರೋಣದ, ರಮೇಶ ಹೊಸಮನಿ, ನೀಲಪ್ಪ ಗಡಗಿ, ಬಾಳಪ್ಪ ನಿಡಗುಂದಿ, ಫಕ್ಕೀರಸಾಬ ನದಾಫ, ಅಂದಾನಯ್ಯ ನರಗುಂದಮಠ, ಎಂ.ಕೆ ಪಾಟೀಲ, ಇಸ್ಮಾಯಿಲ್ ಕೊರ್ಲಹಳ್ಳಿ, ಆರ್.ಬಿ ಬರದ್ವಾಡ, ಬಸವರಾಜ ಗರ್ಜಪ್ಪನವರ, ಎಫ್.ಬಿ ಬರದ್ವಾಡ, ಸಂಗೀತಾ ತಡಹಾಳ, ಎಂ.ಎಂ ದಂಡಿನ, ರುದ್ರಮ್ಮ ಹಿರೇಮಠ ಹಾಜರಿದ್ದರು.

**ಅಂಬೇಡ್ಕರ ನಗರ:** ಧ್ವಜಾರೋಹಣವನ್ನು ಶಮೀರಸಾಬ ಹಿರೇಮನಿ ನೆರವೇರಿಸಿದರು. ಮುಖ್ಯೋಪಾಧ್ಯಾಯ ಕೆ.ಬಿ ಕೊಣ್ಣೂರು, ನಿಂಗಪ್ಪ ದೊಡ್ಡಮನಿ, ಭರಮಪ್ಪ ಮುಳ್ಳಾಳ, ಮೈಲಾರಪ್ಪ ಸೋಮನಕಟ್ಟಿ, ಶಕುಂತಲಿ ಬೇಪಾರಿ ಹಾಜರಿದ್ದರು. **ಸರ್ವಜ್ಞ ಸಂಘ:** ಧ್ವಜಾರೋಹಣವನ್ನು ಗ್ರಾ ಪಂ ಮಾಜಿ ಸದಸ್ಯ ಈಶ್ವರಪ್ಪ ಕುಂಬಾರ ನೆರವೇರಿಸಿದರು. ಸಂಘದ ಅಧ್ಯಕ್ಷ, ಗ್ರಾ ಪಂ ಸದಸ್ಯ ವೀರಣ್ಣ ಚಕ್ರಸಾಲಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶಿವಪುತ್ರಪ್ಪ ಕುಂಬಾರ, ನಾಗಪ್ಪ ಕುಂಬಾರ, ಪ್ರಭು ಕುಂಬಾರ, ಸುರೇಶ ಕುಂಬಾರ, ಮಂಜುನಾಥ ಶಿಗ್ಲಿ, ಬಸವಣ್ಣೆಪ್ಪ ಕುಂಬಾರ, ವೀರಭದ್ರಪ್ಪ ಕುಂಬಾರ ಹಾಜರಿದ್ದರು.

**ಸಹಕಾರಿ ಸಂಘ:** ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ನಂ.2ರ ಧ್ವಜಾರೋಹಣವನ್ನು ಸಂಘದ ಅಧ್ಯಕ್ಷ ರುದ್ರಪ್ಪ ಮುಸ್ಕಿನಭಾವಿ ನೆರವೇರಿಸಿದರು.

ಉಪಾಧ್ಯಕ್ಷ ರುದ್ರಪ್ಪ ವಡ್ಡರ, ನಿರ್ದೇಶಕರಾದ ಮಲ್ಲನಗೌಡ ಪಾಟೀಲ, ಗವಿಶಿದ್ದಪ್ಪ ರೇವಡಿ, ಕಲ್ಲಪ್ಪ ಬೆಟಗೇರಿ, ಶಂಕ್ರಪ್ಪ ಕುಂಬಾರ, ರಾಜಶೇಖರಯ್ಯ ವಸ್ತ್ರದ, ಅಂದಾನಯ್ಯ ಪತ್ರಿಮಠ, ನೀಲವ್ವ ರವದಿ, ಅನ್ನಪೂರ್ಣ ಹಡಗಲಿ, ಮಂಜುನಾಥ ಕರಿಯಲ್ಲಪ್ಪನವರ, ಸಕ್ರಪ್ಪ ರಾಮತಾಳ, ಕೆಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಪ್ಪ ಕಲಗುಡಿ, ವಸಂತ ಚಿಕ್ಕನಗೌಡರ ಹಾಜರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka